# ಹಂಪಿ ಟೈಮ್ಸ್

HAMPI TIMES

ಕನ್ನಡ ದಿನಪತ್ರಿಕೆ
KANNADA DAILY

ಸಂಪಾದಕ: ಬಸಾಪುರ ಬಸವರಾಜ
EDITOR: BASAPUR BASAVARAJA
Email: hampitimes@gmail.com | M:94486 33038





HAMPI TIMES No.1 Leading Local News Paper
85,000 E-PAPER READERS
94486 33038 NEWS PAPER ADD - THE BEST ADVERTISING PLATFORM TO BOOST YOUR BUSINESS
E-mail: hampitimes@gmail.com | # Valmiki Circle hospet-583201



ಸಂಪುಟ:02 • ಸಂಚಿಕೆ: 65 • ಪಿ.ಆರ್.ಜಿ.ಐ.ನಂ.:KARKAN/2023/88055 • ವಿಜಯನಗರ • 04.09.2024 • ಬುಧವಾರ • ಪುಟ:04 • ಬೆಲೆ:2

Volume:02 • Issue: 65 • PRGI No:KARKAN/2023/88055 • VIJAYANAGARA • 04.09.2024 • Wednesday • Page:04 • Rs:2



HAMPI TIMES VIJAYANAGARA

HAPPY TEACHERS DAY

ಶಿಕ್ಷಕರೊಂದಿಗೆ ಭಾವಚಿತ್ರ

SPECIAL OFFER

ಪ್ರತಿ ಫೋಟೋಕ್ಕೆ ಕೇವಲ ರೂ.150/-

PhonePe M: 94486 33038

ಸೆ.4 ರಂದು ಸಂಜೆ 4ರೊಳಗೆ ಬುಕ್ ಮಾಡಿ, ಅವಕಾಶ ನಿಮ್ಮದಾಗಿಸಿಕೊಳ್ಳಿ!

ನಿಮ್ಮ ನೆಚ್ಚಿನ ಶಿಕ್ಷಕರೊಂದಿಗಿನ ಭಾವಚಿತ್ರ ಇದೆಯಾ ?
ಹಾಗಿದ್ದಲ್ಲಿ ಹಂಪಿ ಟೈಮ್ಸ್‌ಗೆ ಕಳಿಸಿಕೊಡಿ
ಸೆ.5 ಶಿಕ್ಷಕರ ದಿನಾಚರಣೆಯಂದು
ಫೋಟೊಗಳು ಪ್ರಕಟಗೊಳ್ಳಲಿವೆ.
e-mail: hampitimes@gmail.com



ಹಂಪಿ ಟೈಮ್ಸ್ ವಿಜಯನಗರದ ಹೆಮ್ಮೆ ಕನ್ನಡ ದಿನಪತ್ರಿಕೆ
ನಂ 1 ಜಿಲ್ಲಾಮಟ್ಟದ ದಿನಪತ್ರಿಕೆ



ವಿಜಯನಗರ ಜಿಲ್ಲೆಯ ಸಮಗ್ರ ಸುದ್ದಿಗಾಗಿ ಹಂಪಿ ಟೈಮ್ಸ್ ದಿನಪತ್ರಿಕೆ ಓದಿರಿ ಸುದ್ದಿ ಮತ್ತು ಜಾಹೀರಾತಿಗಾಗಿ ಸಂಪರ್ಕಿಸಿ

94486 33038


# ಏಕಾಗ್ರತೆ ಹೆಚ್ಚಿಸಲಿದೆ ರೀಡ್ ಎ ಥಾನ್

## 15ನೇ ವಾರ್ಡ್ ಕ್ಲಸ್ಟರ್‌ನಲ್ಲಿ ಪ್ರಾಥಮಿಕ ಶಾಲೆಯಲ್ಲಿ ಮಕ್ಕಳ ಓದು ಅಭಿಯಾನಕ್ಕೆ ಚಾಲನೆ

## ಜಿಲ್ಲಾ ಸಂಯೋಜಕಿ ರೇಖಾ ಹೇಳಿಕೆ | 1 ರಿಂದ 7ನೇ ತರಗತಿ ವಿದ್ಯಾರ್ಥಿಗಳಿಗೆ 21 ದಿನಗಳ ಅಭಿಯಾನ

**ಹಂಪಿ ಟೈಮ್ಸ್ ಹೊಸಪೇಟೆ**

ಮಕ್ಕಳಲ್ಲಿ ಏಕಾಗ್ರತೆ ಮತ್ತು ಓದುವ ಹವ್ಯಾಸ ಹೆಚ್ಚಿಸಿಕೊಳ್ಳಲು ರೀಡ್ ಎ ಥಾನ್ ಸಹಕಾರಿಯಾಗಿದೆ. ಓದುವ ಹವ್ಯಾಸದಿಂದ ಮಕ್ಕಳ ವ್ಯಕ್ತಿತ್ವ ವಿಕಸನಗೊಳ್ಳಲಿದೆ. ಪ್ರತಿಯೊಬ್ಬರೂ ಓದುವಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ರೂಮ್ ಟು ರೀಡ ಪ್ರೊಗ್ರಾಮ್ ಕೋ ಆರ್ಡಿನೇಟರ್ ನಟರಾಜ್ ಬಿ ಹೇಳಿದರು.

ನಗರದ ನೆಹರೂ ಕಾಲೋನಿಯ 15ನೇ ವಾರ್ಡ್ ಕ್ಲಸ್ಟರ್ ನ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಅಂತರಾಷ್ಟ್ರೀಯ ಸಾಕ್ಷರತಾ ದಿನಾಚರಣೆ ಪ್ರಯುಕ್ತ ಸಮಗ್ರ ಶಿಕ್ಷಣ ಕರ್ನಾಟಕ ಹಾಗೂ ಜೆ ಎಸ್ ಡಬ್ಲ್ಯು ರೂಮ್ ಟು ರೀಡ್ ವತಿಯಿಂದ ಹಮ್ಮಿಕೊಂಡಿದ್ದ ರೀಡ್ ಎ ಥಾನ್ ಕಾರ್ಯಕ್ರಮದಲ್ಲಿ ಮಂಗಳವಾರ ಮಾತನಾಡಿದರು. ಪುಸ್ತಕದ ಓದು ಜೀವನಕ್ಕೆ ಆಧಾರವಾಗಲಿದೆ. ಉತ್ತಮ ಪುಸ್ತಕಗಳ ಓದು ಸುಂದರ ಬದುಕಿಕೆ ಅಡಿಪಾಯವಾಗಲಿವೆ. ಮಕ್ಕಳು ನಿತ್ಯ ಸಮಯಸಿಕ್ಕಾಗಲೆಲ್ಲ ಮೊಬೈಲ್ ಬದಲಿಗೆ ಪುಸ್ತಕಗಳನ್ನು ಕೈಯಲ್ಲಿಡಿದು ಓದಿದರೆ ಮೌಲ್ಯಯುತ ಗುಣಗಳನ್ನು ಬೆಳೆಸಿಕೊಂಡು ಸಮಾಜದಲ್ಲಿ ಉತ್ತಮ ವ್ಯಕ್ತಿಗಳಾಗಿ ರೂಪುಗೊಳ್ಳಬಹುದು ಎಂದರು.

15ನೇ ವಾರ್ಡ್ ಕ್ಲಸ್ಟರ್ ನ ಸಮೂಹ ಸಂಪನ್ಮೂಲ ವ್ಯಕ್ತಿ ಎನ್ ನಾಗರಾಜ್ ಮಾತನಾಡಿ, ಇಂದಿನ



ಓದುಗರು ನಾಳಿನ ನಾಯಕರು" ಎಂಬ ಗಾದೆ ಮಾತಿನಂತೆ ಮಕ್ಕಳಲ್ಲಿ ಓದುವ ಕೌಶಲ್ಯಗಳು ಹಾಗೂ ಹವ್ಯಾಸ ಬೆಳೆಸುವ ಮೂಲಕ ಮಕ್ಕಳ ಸರ್ವತೋಮುಖ ಬೆಳವಣಿಗೆಗೆ ರೀಡ್ ಎ ಥಾನ್ ಅನುವು ಮಾಡಿಕೊಡಲಿದೆ. 1 ರಿಂದ 7ನೇ ತರಗತಿವರೆಗೆ ಓದುತ್ತಿರುವ ಮಕ್ಕಳಲ್ಲಿ ಓದುವ ಕೌಶಲ್ಯ ಸಂಸ್ಕೃತಿ ಮತ್ತು ಅಭ್ಯಾಸವನ್ನು ಬೆಳೆಸುವುದು ಓದು ಅಭಿಯಾನದ ಉದ್ದೇಶವಾಗಿದೆ. ಮಕ್ಕಳಲ್ಲಿ ಗ್ರಹಿಕೆ ಸಾಮರ್ಥ್ಯ ಹಾಗೂ ಅರಿವಿನ ಕೌಶಲ್ಯಗಳ ಅಭಿವೃದ್ಧಿಗೆ ಪುಸ್ತಕಗಳ ಓದು ಮಹತ್ವದ ಪಾತ್ರವಹಿಸುತ್ತವೆ. ಓದುವ ಅಭಿಯಾನದ ಅವಧಿಯು ಸೆಪ್ಟೆಂಬರ್ 3 ರಿಂದ18 ರವರೆಗೆ ಮತ್ತು ಸೆಪ್ಟೆಂಬರ್ 26 ರಿಂದ 30, 2024 ರವರೆಗೆ ನಡೆಯಲಿದೆ ಎಂದರು.





> ಮಕ್ಕಳಲ್ಲಿ ಓದುವ ಹವ್ಯಾಸ ಪುಷ್ಟೀಕರಿಸಲಿದೆ. ಏಕಾಗ್ರತೆ ಮತ್ತು ನೆನಪಿನ ಶಕ್ತಿ ಇಮ್ಮಡಿಗೊಳ್ಳಿದೆ. ಪುಸ್ತಕದ ಓದು ಪ್ರತಿ ಮಗುವಿನ ಸರ್ವತೋಮುಖ ಏಳ್ಗಿಗೆ ಸಹಕಾರಿಯಾಗಲಿದೆ. ಮೊಬೈಲ್ ಬದಲಿಗೆ ಪುಸ್ತಕ ಓದಿನತ್ತ ಮಕ್ಕಳನ್ನು ಆಕರ್ಷಿಸಲು ರೀಡ್ ಎ ಥಾನ್ ಸಹಕಾರಿ.
>
> – **ರೇಖಾ,** ಜಿಲ್ಲಾ ಸಂಯೋಜಕಿ

ಶಾಲಾ ಮಕ್ಕಳಿಗೆ ಪುಸ್ತಕಗಳನ್ನು ನೀಡಿ ಅರ್ಧ ತಾಸು ಓದುವಿಕೆಯಲ್ಲಿ ತೊಡಗಿಸಲಾಯಿತು. ಶಿಕ್ಷಕರು ಸಹ ವಿದ್ಯಾರ್ಥಿಗಳೊಂದಿಗೆ ಓದಿದರು. ತಮಗಿಷ್ಟವಾದ ಪುಸ್ತಕಗಳನ್ನು ಆಯ್ಕೆ ಮಾಡಿಕೊಂಡು ಓದುವ ಅವಕಾಶದಲ್ಲಿ ಮಕ್ಕಳು ಸಂತೋಷದಿಂದ ಸಕ್ರಿಯವಾಗಿ ತೊಡಗಿಸಿಕೊಂಡರು. ಶಾಲಾ ಮುಖ್ಯಶಿಕ್ಷಕರು, ಶಿಕ್ಷಕರು ವಿದ್ಯಾರ್ಥಿಗಳು ಇದ್ದರು.

## ಮೈಕ್ರೋ ನ್ಯೂಸ್

### ಅಂಗನವಾಡಿಯ ಸಹಾಯಕಿಯರ ಹುದ್ದೆಗೆ ಅರ್ಜಿ ಆಹ್ವಾನ

**ಹಂಪಿ ಟೈಮ್ಸ್ ಬಳ್ಳಾರಿ**

ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳ ಕಚೇರಿ ಸಿರುಗುಪ್ಪ ಯೋಜನೆ ವ್ಯಾಪ್ತಿಯಲ್ಲಿ ಖಾಲಿಯಿರುವ 31 ಅಂಗನವಾಡಿ ಕಾರ್ಯ ಕರ್ತೆಯರು ಹಾಗೂ 71 ಸಹಾಯಕಿಯರು ಮತ್ತು ಕಂಪ್ಲಿ ತಾಲ್ಲೂಕಿನಲ್ಲಿ 12 ಅಂಗನ ವಾಡಿ ಕಾರ್ಯಕರ್ತೆಯರು ಮತ್ತು 23 ಸಹಾಯಕಿಯರ ಹುದ್ದೆ ಆನ್ ಲೈನ್‌ಮೂಲಕ ಭರ್ತಿ ಮಾಡಲು ಅರ್ಜಿ ಆಹ್ವಾನಿಸಲಾಗಿದೆ. ಅರ್ಹ ಮಹಿಳಾ ಅಭ್ಯರ್ಥಿಗಳು ಅರ್ಜಿಗಳನ್ನು http://karnemakaone.kar.nic.in/abcd/ ವೆಬ್‌ಸೈಟ್‌ಗೆ ಭೇಟಿ ನೀಡಿ ಸಲ್ಲಿಸಬಹುದು. ಅಕ್ಟೋಬರ್ 04 ಅರ್ಜಿ ಸಲ್ಲಿಸಲು ಕೊನೆಯ ದಿನವಾಗಿದೆ. ಲಕೋಟೆ ಯಿಂದ ಬಂದ ಅರ್ಜಿಗಳನ್ನು ಆಯ್ಕೆಗೆ ಪರಿಗಣಿಸಲಾಗುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ ಸಿರುಗುಪ್ಪ ಶಿಶು ಅಭಿವೃದ್ಧಿ ಯೋಜನಾಧಿಕಾರಿ ಕಾರ್ಯಾಲಯ ಅಥವಾ ದೂ.08396–220203, ಮೊ.8050804012 ಗೆ ಸಂಪರ್ಕಿಸಬಹುದು ಎಂದು ಸಿರುಗುಪ್ಪ ಶಿಶು ಅಭಿವೃದ್ಧಿ ಯೋಜನಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

### ಆಂಗ್ಲ ಭಾಷಾ ಅತಿಥಿ ಶಿಕ್ಷಕ ಹುದ್ದೆಗೆ ಬೇಕಾಗಿದ್ದಾರೆ

**ಹಂಪಿ ಟೈಮ್ಸ್ ಬಳ್ಳಾರಿ**

ನಗರದ ಈದ್ಗಾ ರಸ್ತೆಯ ಹಿರಾಳ್‌ಕುಡಂನ ಸರ್ಕಾರಿ ಆದರ್ಶ ವಿದ್ಯಾಲಯದಲ್ಲಿ ಖಾಲಿ ಯಿರುವ ಇಂಗ್ಲೀಷ್ ಮಾಧ್ಯಮದ ಆಂಗ್ಲ ಭಾಷಾ ಅತಿಥಿ ಶಿಕ್ಷಕ ಹುದ್ದೆಗೆ ಬೇಕಾಗಿದ್ದು, ಅಸಕ್ತರು ಸಂಪರ್ಕಿಸಬಹುದು ಎಂದು ಮುಖ್ಯೋಪಾಧ್ಯಯರು ತಿಳಿಸಿದ್ದಾರೆ.

6ನೇ ತರಗತಿಯಿಂದ 10ನೇ ತರಗತಿಯ ವರೆಗೆ ಆಂಗ್ಲ ಮಾಧ್ಯಮ ಶಾಲೆಯಾಗಿದ್ದು, ಎನ್‌ಸಿಆರ್‌ಟಿ ಪಠ್ಯಕ್ರಮ ಹೊಂದಿದೆ.

ಆಸಕ್ತ ಆಂಗ್ಲ ಅತಿಥಿ ಶಿಕ್ಷಕರಿದ್ದಲ್ಲಿ ಈದ್ಗಾ ರಸ್ತೆಯ ಹಿರಾಳ್‌ಕುಡಂನ ಸರ್ಕಾರಿ ಆದರ್ಶ ವಿದ್ಯಾಲಯದ ಮುಖ್ಯೋಪಾಧ್ಯಯರಕಚೇರಿ ಅಥವಾ ಮೊ.9740738762 ಗೆ ಸಂಪರ್ಕಿಸಿ.

### ಸೆ.04ಕ್ಕೆ ಸಾರ್ವಜನಿಕರ ಅಹವಾಲು ಸ್ವೀಕಾರ, ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆ

**ಹಂಪಿ ಟೈಮ್ಸ್ ಬಳ್ಳಾರಿ**

ಲೋಕಸಭಾ ಸದಸ್ಯರು ಹಾಗೂ ಜಿಲ್ಲಾ ಮಟ್ಟದ ದಿಶಾ ಸಮಿತಿಯ ಅಧ್ಯಕ್ಷರಾದ ಈ.ತುಕಾರಾಂ ಅವರು, ಸೆ.04 ರಂದು ಬೆಳಿಗ್ಗೆ 10 ಗಂಟೆಯಿಂದ 11 ಗಂಟೆವರೆಗೆ ಜಿಲ್ಲಾ ಪಂಚಾಯತ್ ನಜೀರ್ ಸಾಬ್ ಸಭಾಂಗಣದಲ್ಲಿ ಕೇಂದ್ರ ಮತ್ತು ಕೇಂದ್ರ ಪುರಸ್ಕೃತ ಯೋಜನೆಗಳ ಕುರಿತ ಸಾರ್ವಜನಿಕರಿಂದ ಅಹವಾಲುಗಳು ಇದ್ದಲ್ಲಿ ಸ್ವೀಕರಿಸುವರು. ಹಾಗಾಗಿ ಕುಂದು ಕೊರತೆಗಳಿರುವ ಸಾರ್ವಜನಿಕರು ತಮ್ಮ ಅಹವಾಲು ಸಲ್ಲಿಸಬಹುದು.

ಬಳಿಕ ಬೆಳಿಗ್ಗೆ 11 ಗಂಟೆಗೆ ಜಿಲ್ಲಾ ಮಟ್ಟದ ದಿಶಾ ಸಮಿತಿ ಸಭೆ ನಡೆಸುವರು ಎಂದು ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶರಣಪ್ಪ ಸಂಕನೂರ ತಿಳಿಸಿದ್ದಾರೆ.

# ಅನ್ಯಾಯ ವಿರುದ್ಧ ಧೈರ್ಯವಾಗಿ ದೂರು ನೀಡಿ

## ಹೆಡ್ ಕಾನ್ಸ್‌ಟೇಬಲ್ ಸ್ವರೂಪ್ ಕೊಟ್ಟೂರು ಸಲಹೆ | ಕಾನೂನು ಅರಿವು ಕಾರ್ಯಕ್ರಮ

**ಹಂಪಿ ಟೈಮ್ಸ್ ಕೂಡ್ಲಿಗಿ**

ಅನ್ಯಾಯ, ಕಿರುಕುಳ, ದೌರ್ಜನ್ಯ.. ಇವುಗಳನ್ನೆಲ್ಲ ಧೈರ್ಯವಾಗಿ ಪ್ರತಿರೋಧಿಸಿ. ಜೊತೆಗೆ ಕಾನೂನಿನ ಬಲ ಮತ್ತು ನೆರವಿನಿಂದ ಅಂತಹ ವರಿಗೆ ತಕ್ಕ ಪಾಠ ಕಲಿಸಿ. ಅದಕ್ಕಾಗಿ ಈ ನೆಲದ ಪ್ರತಿ ಕಾನೂನುಗಳು ಮತ್ತು ಅವುಗಳ ಮಹತ್ವ ವನ್ನು ಪ್ರತಿಯೊಬ್ಬರೂ ಅರಿತುಕೊಳ್ಳಿ ಎಂದು ಗುಡೇಕೋಟೆ ಪೊಲೀಸ್ ಠಾಣೆಯ ಹೆಡ್ ಕಾನ್ಸ್ ಟೇಬಲ್, ಲೇಖಕ ಸ್ವರೂಪ್ ಕೊಟ್ಟೂರು ಮಕ್ಕಳಿಗೆ ಕಿವಿ ಮಾತು ಹೇಳಿದರು.



ತಾಲ್ಲೂಕಿನ ಚಿರತಗುಂಡ ಗ್ರಾಮದ ಶ್ರೀ ಬಸವೇಶ್ವರ ಪ್ರೌಢ ಶಾಲೆಯ ವತಿಯಿಂದ ಪೋಸ್ಕೋ ಮತ್ತು ಬಾಲ್ಯ ವಿವಾಹ ನಿಷೇಧ ಕಾಯ್ದೆ ಕುರಿತು ಮಂಗಳವಾರ ಹಮ್ಮಿಕೊಂಡಿದ್ದ ಕಾನೂನು ಅರಿವು ಕಾರ್ಯಕ್ರಮದಲ್ಲಿ ಮಾತ ನಾಡಿದರು. ಸಮಾಜದಲ್ಲಿ ಇಂದಿಗೂ ಬಾಲ್ಯ ವಿವಾಹ, ಬಾಲ್ಯ ಕಾರ್ಮಿಕ ಪದ್ಧತಿ, ಲೈಗಿಂಕ ದೌರ್ಜನ್ಯ, ಅತ್ಯಾಚಾರ.. ನಡೆಯುತ್ತಲೇ ಇವೆ. ದುರ್ದೈವ ವೆಂದರೆ ಈ ಬಗ್ಗೆ ಧೈರ್ಯವಾಗಿ ದೂರು ಕೊಡಲು ಬಹುತೇಕರು ಮುಂದೆ ಬರುತ್ತಿಲ್ಲ. ಸಾಮಾಜಿಕ ಜವಾಬ್ದಾರಿ ಇಲ್ಲದಿರು ವುದು, ಕಾನೂನಿನ ಸರಿಯಾದ ಜ್ಞಾನದ ಕೊರತೆಯೇ ಇದಕ್ಕೆಲ್ಲ ಕಾರಣ. ಹೀಗಾಗಿ ನಮ್ಮ ದೇಶದಲ್ಲಿ ಜಾರಿಯಲ್ಲಿರುವ ಅದರಲ್ಲೂ ಮಹಿಳೆ ಮತ್ತು ಮಕ್ಕಳ ಕಾನೂನುಗಳ ಬಗ್ಗೆ ಕನಿಷ್ಠ ಜ್ಞಾನ ನೀವು ಹೊಂದಬೇಕು. ಮಹಿಳೆ ಮತ್ತು ಮಕ್ಕಳ ರಕ್ಷಣೆಗೆ ಸಂವಿಧಾನದಲ್ಲಿ ಹೆಚ್ಚು ಒತ್ತು ಕೊಡಲಾಗಿದ್ದು, ನೀವು ಅವುಗಳ ಜ್ಞಾನ ಹೊಂದಿದಾಗ ಮಾತ್ರ ಆ ಕಾನೂನುಗಳನ್ನೆಲ್ಲ ಸಕಾಲದಲ್ಲಿ ಸದ್ಭಳಕೆ ಮಾಡಿಕೊಂಡು ನ್ಯಾಯ ಪಡೆಯಬಹುದು. ಇಂದು ಸಮಾಜ ನೈತಿ–ಕ ಅಧ ಪತನದತ್ತ ಸಾಗುತ್ತಿದೆ. ಪ್ರತಿ ಕ್ಷಣ ವಿಶೇಷವಾಗಿ ಮಹಿಳೆ ಮತ್ತು ಮಕ್ಕಳು ಆತಂಕ, ಭಯದ ವಾತಾವರಣದಲ್ಲಿ ಜೀವಿಸಬೇಕಿದೆ. ಇದಕ್ಕಾಗಿ ನೀವುಗಳು ಸದಾ ಎಚ್ಚರದಿಂದ ಇರಬೇಕು. ಎಂತಹದ್ದೇ ಸಂಧರ್ಭದಲ್ಲಿ ಆತ್ಮಸ್ಥೈರ್ಯವನ್ನು ಕಳೆದುಕೊಳ್ಳಬಾರದು. ಸಂವಿಧಾನದತ್ತ ನಿಮ್ಮ ಹಕ್ಕುಗಳ ರಕ್ಷಣೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದ್ದು ಅದಕ್ಕೆ ನಿಮ್ಮೆಲ್ಲರ ಸಹಕಾರ ತುಂಬಾ ಮುಖ್ಯವೆಂದರು.

ಗುಡೇಕೋಟೆ ಠಾಣೆಯ ಎಎಸ್ಐ ಬಾಬಾ ಪಕ್ರುದ್ದೀನ್ ಮಾತನಾಡಿ ಆಧುನಿಕ ಸಮಾಜದಲ್ಲಿ ಬಾಲ್ಯ ವಿವಾಹ ಒಂದು ಸಾಮಾಜಿಕ ಪಿಡುಗಾಗಿದ್ದು, ಇದನ್ನು ಮಟ್ಟ ಹಾಕಬೇಕಿದೆ. ಬಾಲ್ಯ ವಿವಾಹದ ಬಗ್ಗೆ, ದುರ್ನಡತೆ ವ್ಯಕ್ತಿಗಳ ಬಗ್ಗೆ ತಿಳಿದು ಬಂದರೆ ಮಾಹಿತಿ ತಿಳಿಸಿ. ಜೊತೆಗೆ ಲೈಂಗಿಕ ದೌರ್ಜನ್ಯಕ್ಕೆ ಒಳಗಾದರೆ ಧೈರ್ಯವಾಗಿ ಮುಂದೆ ಬಂದು ದೂರು ನೀಡಿ. ನಾವು ಕಾನೂನು ಕ್ರಮ ಜರುಗಿಸುತ್ತೇವೆ. ಒಟ್ಟಿನಲ್ಲಿ ಮಕ್ಕಳ ರಕ್ಷಣೆ ನಮ್ಮ ಧ್ಯೇಯ ಎಂದರು.

ಮುಖ್ಯಗುರು ಬೊಮ್ಮಣ್ಣ ಅಧ್ಯಕ್ಷತೆವಹಿಸಿದ್ದರು. ಶಿಕ್ಷಕರಾದ ವೀರನಗೌಡ್ರು, ಜಿ.ಸಿ ತಡಕೋಡ್, ನವೀನ್, ಲಿಂಗರಾಜ್, ಓಬಯ್ಯ, ಬೊಮ್ಮಕ್ಕ, ಬೋರಮ್ಮ ಉಪಸ್ಥಿತರಿದ್ದರು.

### ತೋಟಗಾರಿಕೆ ಉತ್ಪನ್ನ ಬೆಳೆಗಾರರ ಸಹಕಾರಿ ಮಾರುಕಟ್ಟೆ


# ನ್ಯೂನ್ಯತೆ ಸರಿಪಡಿಸಲು ಅಗತ್ಯ ದಾಖಲೆ ನೀಡಿ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ತೋಟಗಾರಿಕೆ ಉತ್ಪನ್ನ ಬೆಳೆಗಾರರ ಸಹಕಾರಿ ಮಾರುಕಟ್ಟೆ ಮತ್ತು ಕೃಷಿ ಸಂಸ್ಕರಣಾ ಸಂಘದ ವಿಚಾರಣಾ ವರದಿಯಂತೆ ಸದಸ್ಯತ್ವವನ್ನು ಮುಂದುವರೆಸಲು ಸದಸ್ಯತ್ವ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಹಾಗೂ ಮುಂದುವರೆಸಲು ಅಗತ್ಯ ದಾಖಲೆ ನೀಡಿ ಎಂದು ಜಿಲ್ಲಾ ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಜಿಲ್ಲಾ ತೋಟಗಾರಿಕೆ ಉತ್ಪನ್ನ ಬೆಳೆಗಾರರ ಸಹಕಾರಿ ಮಾರುಕಟ್ಟೆ ಮತ್ತು ಕೃಷಿ ಸಂಸ್ಕರಣ ಸಂಘದ ವಾರ್ಷಿಕ ಮಹಾಜನ ಸಭೆಯನ್ನು ಸೆ.23ರಂದು ಬೆಳಿಗ್ಗೆ 11.30ಕ್ಕೆ ಬಿ.ಗೋನಾಳ್ ಕ್ಷೇತ್ರದಲ್ಲಿನ ಸಂಗ್ರಹಣ ಕೇಂದ್ರ ಆವರಣದಲ್ಲಿ ನಡೆಯಲಿದೆ.

ಸಂಘದ ಸದಸ್ಯರ ನ್ಯೂನ್ಯತೆಗಳನ್ನು ಸರಿಪಡಿಸಿಕೊಳ್ಳಲು ಹಾಗೂ ಸದಸ್ಯತ್ವ ಮುಂದುವರೆಸಲು ಸದಸ್ಯರು ಸೆ.23ರೊಳಗಾಗಿ ಸದಸ್ಯರು ಚಾಲ್ತಿ ವರ್ಷದ ಪಹಣಿ, ತೋಟಗಾರಿಕೆ ಬೆಳೆಯುತ್ತಿರುವ ಬಗ್ಗೆ ಗಣಕೀಕೃತ ಬೆಳೆ ದೃಢೀಕರಣ ಸಂಬಂಧ ಪಟ್ಟ ತಹಶೀಲ್ದಾರರಿಂದ ಪಡೆದಿರುವ ಪ್ರತಿ, ಆಧಾರ್‌ಕಾರ್ಡ್, ಹಿಂದಿನ ಷೇರು ಮೊತದ ನಕಲು ಪ್ರತಿ, ಸಂಘದ ಬೈಲಾ ಅನುಮೋದನೆಯಂತೆ ಸದಸ್ಯತ್ವ ಶುಲ್ಕ ರೂ.1,800 ವ್ಯತ್ಯಾಸದ ಶುಲ್ಕ ಪಾವತಿಸಬೇಕು. ಕೊಳವೆ ಭಾವಿ ಹೊಂದಿರುವ ಇಲ್ಲವೇ ನೀರಾವರಿ ಸೌಲಭ್ಯ ಹೊಂದಿರುವ ಬಗ್ಗೆ ನಿರಂತರವಾಗಿ ತೋಟಗಾರಿಕೆ ಬೆಳೆ ಬೆಳೆಯುತ್ತಿರುವ ಬಗ್ಗೆ ದಾಖಲಾತಿ ಸಲ್ಲಿಸಬೇಕು. ಭಾವಚಿತ್ರ ದ್ವಿ ಪ್ರತಿ, ಜಾತಿ ಪ್ರಮಾಣ ಪತ್ರ, ತಮ್ಮ ವೃತ್ತಿ ಅರ್ಜಿಯಲ್ಲಿ ಸಲ್ಲಿಸಬೇಕು ಎಂದು ಜಿಲ್ಲಾ ಹಾಪ್‌ಕಾಮ್ಸ್‌ನ ವ್ಯವಸ್ಥಾಪಕ ನಿರ್ದೇಶಕರು ಅವರು ತಿಳಿಸಿದ್ದಾರೆ.



ಹೊಸಪೇಟೆಯ ಮೇದಾರ ಓಣಿ ಮಹಿಳೆಯರಿಂದ ಶ್ರೀ ಓಂಕಾರೇಶ್ವರ ದೇವಸ್ಥಾನದಲ್ಲಿ ಮಂಗಳವಾರ 4ನೇ ವರ್ಷದ ಶ್ರೀ ವೀರಭದ್ರೇಶ್ವರ ಜಯಂತಿಯನ್ನು ವಿಶೇಷ ಪೂಜೆ ಸಲ್ಲಿಸಿ ಆಚರಿಸಲಾಯಿತು. ಮುಖಂಡರಾದ ಯು.ಎಂ.ಗಂಗಮ್ಮ, ಎನ್.ಎಂ.ಮಂಗಳ, ಯು.ಎಂ.ವಿಜಯಲಕ್ಷ್ಮೀ, ಚಿತ್ತವಾಡ್ಗಿ ಎಂ.ತಿಪ್ಪೇಸ್ವಾಮಿ, ಎನ್.ಎಂ.ರವಿಶಂಕರ, ಬಿ.ಪಂಪಾಪತಿ, ಕೆ.ಮಂಜುಳಾ, ಶಿವಕ್ಕ, ವೀಣಾ, ಕವಿತಾ, ಹೇಮಾವತಿ, ಕರಿಬಸಮ್ಮ, ಪ್ರತಿಭಾ ಇತರರಿದ್ದರು.

# ಸೆ.06 ರಂದು ನೇರ ಸಂದರ್ಶನ

**ಹಂಪಿ ಟೈಮ್ಸ್ ಬಳ್ಳಾರಿ**

ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ವತಿಯಿಂದ ಸೆ.6 ರಂದು ಬೆಳಿಗ್ಗೆ 10 ಗಂಟೆಯಿಂದ ಮಧ್ಯಾಹ್ನ 2 ಗಂಟೆಯವರೆಗೆ ನೇರ ಸಂದರ್ಶನ ಆಯೋಜಿಸಲಾಗಿದೆ ಎಂದು ಜಿಲ್ಲಾ ಉದ್ಯೋಗಾಧಿಕಾರಿ ಪಿ.ಎಸ್.ಹಟ್ಟಪ್ಪ ಅವರು ತಿಳಿಸಿದ್ದಾರೆ.

ನೇರ ಸಂದರ್ಶನವು ನಗರದ ಸಿರುಗುಪ್ಪ ರಸ್ತೆಯ ಹವಂಭಾವಿ ಬಳಿಯ ಬ್ರಿಲಿಯಂಟ್ ಪಬ್ಲಿಕ್ ಶಾಲೆಯ ಎದುರು ಮಾಸ್ಸೆ ಫರ್ಗುಸನ್ ಟ್ರ್ಯಾಕ್ಟರ್ಸ್‌ಗಳು, ಹೊಸ ಟ್ರ್ಯಾಕ್ಟರ್ ಶೋರೂಂ, ಟಫೆ ಮಾಸ್ಸೆ ಫರ್ಗುಸನ್, ಬಳ್ಳಾರಿ ಇಲ್ಲಿ ನಡೆಯಲಿದ್ದು, ಇವರು ತಮ್ಮಲ್ಲಿನ ಖಾಲಿ ಇರುವ ಹುದ್ದೆಗಳನ್ನು ನೇರ ಸಂದರ್ಶನದ ಮೂಲಕ ನೇಮಕಾತಿ ಮಾಡಿಕೊಳ್ಳುವರು.ಈ ಸಂದರ್ಶನದಲ್ಲಿ ಭಾಗವಹಿಸಲು ಯಾವುದೇ ಶುಲ್ಕ ಇರುವುದಿಲ್ಲ.ಬೇಕಾದ ದಾಖಲೆ: ಆಧಾರ್ ಕಾರ್ಡ್, ಸ್ವ ವಿವರಗಳೊಂದಿಗೆ ಹಾಜರಾಗಬೇಕು. ಆಸಕ್ತ ಅಭ್ಯರ್ಥಿಗಳು ಭಾಗವಹಿಸಿ ಇದರ ಸದುಪಯೋಗ ಪಡೆದುಕೊಳ್ಳಬೇಕು. ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಅಥವಾ ಮೊ.9742718891, 9663263086, 9900827768, 6360408094 ಗೆ ಸಂಪರ್ಕಿಸಬಹುದು ಎಂದು ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

## ವಿಜ್ಞಾನ

# ಪ್ರಾಣಿಗಳು ಏಕೆ ಆಹಾರ ತಯಾರಿಸುವುದಿಲ್ಲ?

■ ಆರ್.ಬಿ.ಗುರುಬಸವರಾಜ

ತರಗತಿಯಲ್ಲಿ ಶಿಕ್ಷಕರು ಸ್ವಪೋಷಕಗಳು ಮತ್ತು ಪರಪೋಷಕಗಳ ಬಗ್ಗೆ ಹೇಳುತ್ತಿದ್ದರು. ಸಸ್ಯಗಳು ಸ್ವಪೋಷಕಗಳು ಮತ್ತು ಬಹುತೇಕ ಪ್ರಾಣಿಗಳು ಪರಪೋಷಕಗಳು ಎಂದು ಉದಾಹರಣೆ ಸಮೇತ ವಿವರಣೆ ನೀಡುತ್ತಿದ್ದರು. ಸದಾ ತರಲೆ ಪ್ರಶ್ನೆಗೆ ಹೆಸರುವಾಸಿಯಾದ ಸುಹಾಸನು ಎದ್ದು ನಿಂತು “ಸರ್, ಸಸ್ಯಗಳಂತೆ ಪ್ರಾಣಿಗಳು ಏಕೆ ಆಹಾರ ತಯಾರಿಸುವುದಿಲ್ಲ?” ಎಂದನು. ಇದು ತುಂಬಾ ಒಳ್ಳೆಯ ಪ್ರಶ್ನೆ ಎಂದು ಮೆಚ್ಚಿಕೊಂಡ ಶಿಕ್ಷಕರು ‘ಇದಕ್ಕೆ ನಿಮ್ಮಲ್ಲಿ ಯಾರಾದರೂ ಉತ್ತರಿಸುವಿರಾ?’ ಎಂದರು. ಆಗ ಮೂಲೆಯಲ್ಲಿ ಕುಳಿತಿದ್ದ ನವೀನ “ಸರ್ ನಾನು ಹೇಳ್ತೀನಿ” ಎಂದ. ಶಿಕ್ಷಕರು ನವೀನನಿಗೆ ಉತ್ತರಿಸಲು ಅವಕಾಶ ನೀಡಿದರು. ಅವನ ಉತ್ತರ ಹೀಗಿದೆ.



ನಮಗೆಲ್ಲಾ ತಿಳಿದಿರುವಂತೆ ಸಸ್ಯಗಳು ದ್ಯುತಿಸಂಶ್ಲೇಷಣಾ ಕ್ರಿಯೆಯ ಮೂಲಕ ಆಹಾರ ತಯಾರಿಸುತ್ತವೆ. ಬೇರುಗಳಿಂದ ಹೀರಿಕೊಂಡ ನೀರು ಮತ್ತ ಲವಣಗಳು, ಎಲೆಗಳಲ್ಲಿನ ಪತ್ರಹರಿತ್ತಿನಿಂದ ಸಹಾಯದಿಂದ ವಾತಾವರಣದ ಇಂಗಾಲದ ಡೈಆಕ್ಸೈಡ್ ಮತ್ತು ಸೂರ್ಯನ ಬೆಳಕು ಮತ್ತು ಶಾಖ ಬಳಸಿಕೊಂಡು ಸಸ್ಯಗಳು ಆಹಾರ ತಯಾರಿಸುತ್ತವೆ. ಹೀಗೆ ತಯಾರಿಸಿದ ಆಹಾರವನ್ನು ಬೇರೆ ಬೇರೆ ಭಾಗಗಳಲ್ಲಿ ಸಂಗ್ರಹಿಸುತ್ತವೆ. ದ್ಯುತಿಸಂಶ್ಲೇಷಣೆಯು ಸೂರ್ಯನ ಬೆಳಕು, ನೀರು ಮತ್ತು ಇಂಗಾಲದ ಡೈಆಕ್ಸೈಡ್ ಅನ್ನು ಗ್ಲೂಕೋಸ್ ಮತ್ತು ಆಮ್ಲಜನಕವಾಗಿ ಪರಿವರ್ತಿಸುವ ಪ್ರಕ್ರಿಯೆಯಾಗಿದೆ.

ಇದರರ್ಥ ಸಸ್ಯಗಳು ಸರಳ ಕಚ್ಚಾ ವಸ್ತುಗಳಿಂದ ತಮ್ಮ ಸ್ವಂತ ಆಹಾರ ಮತ್ತು ಶಕ್ತಿಯನ್ನು ಉತ್ಪಾದಿಸುತ್ತವೆ. ಆದರೆ ಪ್ರಾಣಿಗಳು ದ್ಯುತಿಸಂಶ್ಲೇಷಣೆ ಮಾಡಲು ಅಗತ್ಯವಾದ ಭಾಗಗಳನ್ನು ಹೊಂದಿಲ್ಲ. ಹಾಗಾಗಿ ಸಸ್ಯಗಳಂತೆ ಪ್ರಾಣಿಗಳು ತಮ್ಮದೇ ಆದ ಆಹಾರವನ್ನು ತಯಾರಿಸಲು ಸಾಧ್ಯವಿಲ್ಲ.

ಬದಲಾಗಿ ಪ್ರಾಣಿಗಳು ಬದುಕಲು ಅಗತ್ಯವಾದ ಪೋಷಕಾಂಶಗಳು ಮತ್ತು ಶಕ್ತಿಯನ್ನು ಇತರ ಜೀವಿಗಳು ಅಥವಾ ಸಾವಯವ ಪದಾರ್ಥಗಳಿಂದ ಪಡೆಯುತ್ತವೆ. ಸಸ್ಯಗಳಂತೆ ಪ್ರಾಣಿಗಳು ತಮ್ಮದೇ ಆದ ಆಹಾರವನ್ನು ತಯಾರಿಸಲು ಸಾಧ್ಯವಾಗದಿದ್ದರೂ, ಜೀರ್ಣಾಂಗ ವ್ಯವಸ್ಥೆಗಳು, ಹಲ್ಲುಗಳು ಮತ್ತು ದವಡೆಗಳು ಮತ್ತು ಬೇಟೆಯಾಡಲು, ಸಂಗ್ರಹಿಸಲು ಮತ್ತು ಕಸಿದುಕೊಳ್ಳಲು, ಆಹಾರವನ್ನು ಪಡೆಯಲು ಮತ್ತು ಬಳಸಿಕೊಳ್ಳಲು ವಿಶೇಷವಾದ ರೂಪಾಂತರಗಳನ್ನು ಅಭಿವೃದ್ಧಿಪಡಿಸಿವೆ. ಈ ರೂಪಾಂತರಗಳು ವಿಶಾಲ ವ್ಯಾಪ್ತಿಯ ಪರಿಸರದಲ್ಲಿ ಪ್ರಾಣಿಗಳು ಅಭಿವೃದ್ಧಿ ಹೊಂದಲು ಮತ್ತು ಪರಿಸರ ವ್ಯವಸ್ಥೆಗಳಲ್ಲಿ ಪ್ರಮುಖ ಪಾತ್ರಗಳನ್ನು ವಹಿಸಲು ಅವಕಾಶ ಮಾಡಿಕೊಟ್ಟಿವೆ.

## ಮಕ್ಕಳು ಅರಸರಾಗಬೇಕೆ?

**ಓದಲು ಸಮಯವಿಲ್ಲವೆಂದು ಪತ್ರಿಕೆಯನ್ನು ಕೈ ಬಿಡಬಾರದು, ಕನ್ನಡ ಪತ್ರಿಕೆಯೊಂದು ಕೈಯಲ್ಲಿಡಿದರೆ, ಹಿರಿಯರನ್ನು ಅನುಸರಿಸುವ ಮಕ್ಕಳು ಮೊಬೈಲ್ ಬಿಟ್ಟು ಅಕ್ಷರ ದಾಸರಾಗುತ್ತಾರೆ. ಅಕ್ಷರ ದಾಸರಾದರೆ ಅರಸರು ಆಗಬಲ್ಲರಲ್ಲವೇ ?**

## ನೀವೂ ಬರೆಯಬಹುದು

ಹಂಪಿ ಟೈಮ್ಸ್ ಪತ್ರಿಕೆ ಆರಂಭಿಸಿದ್ದು ನಾವಾದರೂ, ಕೈಹಿಡಿದು ನಡೆಸುವವರು ನೀವು. ನಮ್ಮ ಇಚ್ಛೆಯೂ ಒಳಗೊಂಡಂತೆ ನಿಮ್ಮ ಆಶಯಗಳಿಗೆ ತಕ್ಕಂತೆ ಪತ್ರಿಕೆಯನ್ನು ರೂಪಿಸುವ ಹೊಣೆಗಾರಿಕೆ, ಜವಾಬ್ದಾರಿಯೂ ನಮ್ಮದಾಗಿದೆ. ಇಲ್ಲಿ ಕೇವಲ ನಮ್ಮ ಬರವಣಿಗೆ ಅಷ್ಟೇ ಅಲ್ಲದೇ, ಬರಹಗಾರರಾಗಿದ್ದರೆ ನೀವೂ ಕೂಡ ನಿಮ್ಮ ಬರಹವನ್ನಿಲ್ಲಿ ಓದಬಹುದು. ಈ ನಿಟ್ಟಿನಲ್ಲಿ ನಿಮ್ಮಿಂದ ಕತೆ, ಕವನ, ವಿವಿಧ ಪ್ರಕಾರದ ಸಾಹಿತ್ಯ ಹಾಗೂ ಮಹಿಳಾ ಮತ್ತು ಮಕ್ಕಳ ಪರ ಚಿಂತನೆ ಒಳಗೊಂಡ ಲೇಖನಗಳನ್ನು ನಾವು ನಿರೀಕ್ಷಿಸುತ್ತಿದ್ದೇವೆ. ಜೊತೆಗೆ ಬಹುಮುಖ್ಯವಾಗಿ ಈ ನೆಲದ ಜನರ ಧ್ವನಿಯಾಗುವ ಹಂಬಲದಿಂದ ಸಾರ್ವಜನಿಕ ಕುಂದು ಕೊರತೆಗಳನ್ನು ಹೇಳಿಕೊಳ್ಳಬಹುದು. ಓದುಗ ಪ್ರಭುಗಳಾದ ನೀವು ಪತ್ರಿಕೆಯ ಭಾಗವೂ ಹೌದು. ಹೀಗಾಗಿ ನಿಮ್ಮ ಪ್ರತಿಕ್ರಿಯೆಯೂ ನಮಗೆ ಅತ್ಯಮೂಲ್ಯ. **ಕಥೆ, ಕವನ, ಸಾಹಿತ್ಯ, ತಂತ್ರಜ್ಞಾನ, ಆರೋಗ್ಯ, ಶಿಕ್ಷಣ, ಕ್ರೀಡೆ, ಕೃಷಿ, ಅಪರೂಪದ ವ್ಯಕ್ತಿಗಳು, ಅಂಕಣ, ಮಹಿಳೆ ಮತ್ತು ಮಕ್ಕಳು ಸೇರಿದಂತೆ ವಿವಿಧ ಕ್ಷೇತ್ರಗಳ** ಕುರಿತಾದ ನಿಮ್ಮ ಬರಹಗಳನ್ನೆಲ್ಲ ಸ್ವೀಕರಿಸುತ್ತೇವೆ ಆದರೆ, ಕಳುಹಿಸಿದ ಬರಹಗಳಲ್ಲಿ ಸಮಂಜಸ ಎನಿಸುವುದಷ್ಟೇ ಪ್ರಕಟಿಸುತ್ತೇವೆ. ನಮ್ಮ ನಂಬುಗೆಯ ಸಮಾಜಕ್ಕಾಗಿ ಒಳಿತನ್ನೇ ಬಯಸುತ್ತ, ಬರೆಯುತ್ತ ಎಲ್ಲರೂ ಒಳ ಗೊಳ್ಳೋಣ.

**ಬೆಳಕಿನ ಹಾದಿ:** ರಾಮಾಯಣ, ಮಹಾಭಾರತ, ಸಾಧು ಸಂತರು, ವಿಜ್ಞಾನಿ, ಹೀಗೆ ಪುಣ್ಯ ಪುರುಷರ ಜೀವನದಲ್ಲಿ ನಡೆದ ಘಟನೆಗಳು ಅಥವಾ ನೈತಿಕ ಕಥೆಗಳನ್ನು ಬರೆದು, ಕೊನೆಗೆ ಅಂತಹ ಕಥೆಯಿಂದ ನಮಗೆ ತಿಳಿಯುವ ಮೌಲ್ಯದ ಬಗ್ಗೆ 250 ಪದಗಳ ಮಿತಿಯಲ್ಲಿ ಬೆಳಕಿನ ಹಾದಿ ವಿಭಾಗಕ್ಕೆ ಬರೆದು ಕಳುಹಿಸಿ. ಸೂಕ್ತವಿದ್ದಲ್ಲಿ ಪ್ರಕಟಿಸುತ್ತೇವೆ. ಹೊಸ ಬರಹಗಾರರಿಗೆ ಅವಕಾಶ ಸಿದ್ಧವಾಗಿದೆ.

**ಸಂಪಾದಕರು: ಹಂಪಿ ಟೈಮ್ಸ್, ಶ್ರೀ ಓಂಕಾರೇಶ್ವರ ದೇವಸ್ಥಾನದ ಪಕ್ಕದಲ್ಲಿ, ವಾಲ್ಮೀಕಿ ವೃತ್ತದ ಹತ್ತಿರ, ಹೊಸಪೇಟೆ, ವಿಜಯನಗರ ಜಿಲ್ಲೆ.**
ಇ-ಮೇಲ್:hampitimes@gmail.com
M: 94486 33038

## ಓದುಗರ ಗಮನಕ್ಕೆ

**ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತುಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರ ರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.**

**– ಜಾಹೀರಾತು ವ್ಯವಸ್ಥಾಪಕರು.**

# ಸಿಲ್ಕರೂಟಿನ ರತ್ನಗಂಬಳಿಗಳು

10ನೇ ಶತಮಾನದ ಕನ್ನಡದ ಮೊದಲ ಗದ್ಯಕೃತಿ ‘ವಡ್ಡಾರಾಧನೆ’ಯಲ್ಲಿ ಸುಕುಮಾರ ಸ್ವಾಮಿಯ ಕಥೆಯಿದೆ. ವಣಿಕ ಮನೆತನದ ಸುಕುಮಾರಸ್ವಾಮಿ ತನ್ನ ಸೀಮೆಯ ದೊರೆಗಿಂತಲೂ ಸಿರಿವಂತ ಕುಟುಂಬದವನು. ದೊರೆಗೆ ವಿದೇಶದ ವ್ಯಾಪಾರಿಗಳು ತಂದ ರತ್ನಗಂಬಳಿಯನ್ನು 32 ಲಕ್ಷ ದೀನಾರ ತೆತ್ತು ಕೊಳ್ಳುವ ತಾಕತ್ತಿಲ್ಲ. ಅದೇ ರತ್ನಗಂಬಳಿಯನ್ನು ಸುಕುಮಾರನ ತಾಯಿ ಖರೀದಿಸಿ, ತುಂಡುಮಾಡಿ ಸೊಸೆಯಂದಿರ ಚಪ್ಪಲಿಗೆ ಸಿಕ್ಕಿಸಿಕೊಳ್ಳಲು ಕೊಡುತ್ತಾಳೆ. ಇದು ವ್ಯಾಪಾರಿ ಕುಟುಂಬಗಳ ವಿಲಾಸ ಜೀವನದ ಆತ್ಯಂತಿಕ ರೂಪಕ; ರಾಜಕಾರಣ ಮತ್ತು ವ್ಯಾಪಾರಗಳ ನಡುವಣ ಶಕ್ತಿಪ್ರದರ್ಶನ ಕೂಡ.

‘ವಡ್ಡಾರಾಧನೆ’ಯ ಕತೆಗಳು ಕನ್ನಡದವಾದರೂ, ಅವುಗಳ ಕಥೆ ನಡೆವ ಭೂಮಿಕೆ ಸೌರಾಷ್ಟ್ರ ಅರ್ಥಾತ್ ಗುಜರಾತ್. ಸೌರಾಷ್ಟ್ರದ ಬಂದರುಗಳು ಇರಾನ್ ಇರಾಕ್ ಅರೇಬಿಯಾ ಜತೆ ಶತಮಾನಗಳಿಂದ ಸಂಬಂಧವುಳ್ಳವು. ಮಧ್ಯ ಏಶಿಯಾದ ಬಂದರುಗಳಿಂದ ಕುದುರೆ, ಸುಗಂಧ, ರತ್ನಗಂಬಳಿಗಳು ಸೌರಾಷ್ಟ್ರಕ್ಕೆ ಬಂದಿಳಿಯುತ್ತಿದ್ದವು. ಬಳಿಕ ಭಾರತದ ಬೇರೆಬೇರೆ ಭಾಗಕ್ಕೆ ರವಾನೆ ಆಗುತ್ತಿದ್ದವು. ಈ ರತ್ನಗಂಬಳಿಗಳು ಆಫಘಾನಿಸ್ಥಾನ ಅಜರಬೈಜಾನ್ ಉಜ್ಬೆಕಿಸ್ತಾನ ಇರಾನ್ ಇರಾಕ್ ಅಝುರಬೈಜಾನ್‌ಗಳಲ್ಲಿ ನೇದವು. ಇವು ಚೀನಾದ ಬೀಜಿಂಗಿನಿಂದ ಶುರುವಾಗಿ ಸಮರಖಂಡ್ ಬುಖಾರಾ ಮಶಾದ್ ತೆಹರಾನ್ ಬಗ್ದಾದ್ ದಮಾಸ್ಕಸ್ ಕೈರೊ ಇಸ್ತಾನ್‌ಬುಲ್ ವೆನಿಸ್ ರೋಂ ತನಕ ಸಾಗುವ, ಏಳುಸಾವಿರ ಕಿಮೀ ಉದ್ದದ ರೇಷ್ಮೆಹಾದಿಗೆ ಲಗತ್ತಾದ ನಗರಗಳು.

ರೇಷ್ಮೆಹಾದಿಯು ವ್ಯಾಪಾರಕ್ಕೆ ಮಾತ್ರವಲ್ಲ, ಸೈನಿಕರ ಸಂತರ ವಿದ್ವಾಂಸರ ಪಶುಪಾಲಕರ ಸಂಚಾರಕ್ಕೂ ಲಗತ್ತುಗೊಂಡಿತ್ತು. ಮೇಲ್ಕಾಣಿಸಿದ ದೇಶಗಳು ಸ್ಥಳೀಯವಾಗಿ ಸಿಗುವ ಕುರಿಗಳ ತುಪ್ಪಟ ಮತ್ತು ಚೀನಾದ ರೇಷ್ಮೆ ಬಳಸಿ, ರತ್ನಗಂಬಳಿ ತಯಾರಿಸುವ ಪ್ರಾಚೀನ ಪರಂಪರೆಯುಳ್ಳವು. ಸಿಲ್ಕರೂಟಿನಲ್ಲಿ ಸಾಗುವ ವ್ಯಾಪಾರಿ ಕಾರವಾನುಗಳಲ್ಲಿ ರತ್ನಗಂಬಳಿ ರೇಷ್ಮೆವಸ್ತ್ರಗಳ ಜತೆ, ಸುಗಂಧ ಚಿನ್ನ ಬೆಳ್ಳಿ ಚಹ ಸಾಂಬಾರಪದಾರ್ಥ ಅಫೀಮು ಮುಖ್ಯ ಸರಕುಗಳಾಗಿದ್ದವು. ಭಾರತದಿಂದ ಹತ್ತಿಬಟ್ಟೆ ಸಂಬಾರವಸ್ತುಗಳು ಸಿಲ್ಕ್ರೂಟಿನ ಸರಕಾಗಿದ್ದರೆ, ಅಲ್ಲಿಂದ ರತ್ನಗಂಬಳಿ ಚಿನ್ನ ಆಮದಾಗುತ್ತಿದ್ದವು.

ರೇಷ್ಮೆಹಾದಿಯ ಒಂದು ಶಾಖೆ ಇರಾನಿನ ಮಶಾದ್ ನಗರದಿಂದ ಕವಲೊಡೆದು ಕಾಬೂಲ್ ಮೂಲಕ ಪಂಜಾಬ್ ಕಾಶ್ಮೀರಗಳಿಗೆ ಪ್ರವೇಶಿಸುತ್ತದೆ. ಮತ್ತೊಂದು ಚೀನಾದ ಕಶ್ಗರ್‌ನಿಂದ ಕವಲೊಡೆದು ಲಡಾಕ್ ಮೂಲಕ ಕಾಶ್ಮೀರವನ್ನು ಪ್ರವೇಶಿಸುತ್ತದೆ. ಕಾಶ್ಮೀರದ ರತ್ನಗಂಬಳಿಗಳ ಕುಶಲಕಲೆ ರೇಷ್ಮೆಹಾದಿಯ ಮೂಲಕವೇ ಭಾರತಕ್ಕೆ ಬಂದಿದ್ದು. ಕಾಶ್ಮೀರದ ಸುಲ್ತಾನ ಜೈನುಲ್ ಅಬ್ದೀನ್ (15ನೇ ಶತ) ಇರಾನಿನಿಂದ ನೇಕಾರ ಕುಟುಂಬ ಗಳನ್ನು ಕರೆಯಿಸಿಕೊಂಡು, ಸ್ಥಳೀಯರಿಗೆ ಕಲೆಯನ್ನು ಪರಿಚಯಿಸಿದನು. ಇರಾನಿನಲ್ಲಿ ನಾವು ಕಂಡ ರತ್ನಗಂಬಳಿಗಳ ಮೇಲೆ ಕೇವಲ ಪರ್ಶಿಯನ್ ಸಂಸ್ಕೃತಿ ಇರಲಿಲ್ಲ. ದೂರದ ವೆನಿಸಿನ ಬಂದರಿನ ಚಿತ್ರವಿತ್ತು. ಚೀನಾದ ಗಿಡಮರಗಳೂ ಭಾರತದ ಆನೆ ಹುಲಿಗಳೂ ಇದ್ದವು. ಈ ಅರ್ಥದಲ್ಲಿ ರತ್ನಗಂಬಳಿಗಳು ಜಾಗತೀಕರಣಗೊಂಡ ರಾಜಕಾರಣ, ಕಲೆ ಮತ್ತು ವ್ಯಾಪಾರದ ಸಂಕೇತಗಳು.



ರಹಮತ್ ತರೀಕೆರೆ
ಲೇಖಕರು, ಸಂಸ್ಕೃತಿ ಚಿಂತಕರು

Scan For Digital Colourful
HAMPI TIMES E-paper

ಪರ್ಶಿಯಾ (ಇರಾನ್) ಮತ್ತು ಆಫಘಾನಿಸ್ತಾನಗಳು ಪ್ರಾಚೀನ ಕಾಲದಿಂದಲೂ ಭಾರತದ ನೆರೆದೇಶಗಳಷ್ಟೆ. ಭಾರತಕ್ಕೆ ಆರ್ಯರು ಇದೇ ಇರಾನ್–ಆಫಘಾನಿಸ್ಥಾನಗಳ ಮೂಲಕ ಬಂದರು. ಬಹಮನಿ ರಾಜ್ಯದ ಪ್ರಧಾನಮಂತ್ರಿ ಮಹಮೂದ್ ಗವಾನ, ಬಿಜಾಪುರದ ಆದಿಲಶಾಹಿ ರಾಜ್ಯದ ಮೊದಲ ಸುಲ್ತಾನ ಯೂಸೂಫ್ ಮುಂತಾದವರು ಇರಾನ್ ಮೂಲದವರು. ಭಾರತದ ಚಿಸ್ತಿಸೂಫಿಗಳ ಮೂಲ ಚಿಸ್ತಿ ಪಟ್ಟಣವು ಆಫಘಾನಿಸ್ಥಾನದಲ್ಲಿದೆ. ಭಾರತದ ಅಗ್ನಿಪೂಜಕ ಫಾರಸಿಗಳು ಇರಾನಿನವರು. ಇರಾನಿನ ಫಾರಸಿ ಭಾಷೆಯು, ಭಾರತದ ಸಂಸ್ಕೃತ ಉರ್ದು ಬಂಗಾಳಿ ಮರಾಠಿ ಒಡಿಯಾ ಕಾಶ್ಮೀರಿ ಒಳಗೊಂಡಂತೆ ಇಂಡೊ ಆರ್ಯನ್ ಕುಟುಂಬದ ಹಿರಿಯ ಸದಸ್ಯ. ಆರ್ಯನ್ ಶಬ್ದದ ಆಡುರೂಪವೇ ಇರಾನ್. ಇರಾನಿನಲ್ಲಿ ಆರ್ಯನ್ ಎಂಬ ಹೆಸರಿನ ಹೋಟೆಲುಗಳಿವೆ. ಫಾರಸಿ ಮೊಗಲರ ಕಾಲದಲ್ಲಿ ಪ್ರಮುಖ ಆಡಳಿತ ಭಾಷೆಯಾಯಿತು. ಇಕ್ಬಾಲ್, ಚಂದ್ರಭಾನ್ ಬ್ರಾಹ್ಮನ್, ಗಾಲಿಬ್ ಫಾರಸಿಯಲ್ಲಿ ಕಾವ್ಯ ರಚಿಸಿದರು. ಚಂದ್ರಭಾನ್ ಕಾವ್ಯವು, ಈಗಲೂ ಇರಾನಿನ ವಿಶ್ವವಿದ್ಯಾಲಯಗಳಲ್ಲಿ ಪಠ್ಯ. ಕನ್ನಡವನ್ನೂ ಒಳಗೊಂಡಂತೆ ಭಾರತದ ಭಾಷೆಗಳ ಶಬ್ದಸಮೃದ್ಧಿಯಲ್ಲಿ ಫಾರಸಿಯಿದೆ. ಉರ್ದು ಹುಟ್ಟಿನಲ್ಲಿ ಅದರ ಕೈವಾಡವಿದೆ. ಭಾರತದ ಅನೇಕ ವಾಸ್ತುಶಿಲ್ಪ ಚಿತ್ರಕಲೆ ಕುಶಲಕರ್ಮಗಳಲ್ಲಿ ಇರಾನಿನ ಪ್ರಭಾವವಿದೆ. ನಾವು ಇರಾನ್ ಇರಾಕ್ ಅಝುರಬೈಜಾನ್ ಜೋರ್ಡಾನ್ ಟರ್ಕಿಗಳಲ್ಲಿ ಸುತ್ತಾಡುವಾಗ ಈ ಚಾರಿತ್ರಿಕ ನೆನಪುಗಳು ಹಿಂಬಾಲಿಸುತ್ತಿದ್ದವು.







ಮಧ್ಯ ಏಶಿಯಾದ ದೇಶಗಳಲ್ಲಿರುವಾಗ ನಾವು ಅಲ್ಲಿ ರತ್ನಗಂಬಳಿ ಮಾರುಕಟ್ಟೆ ಮತ್ತು ಮ್ಯೂಸಿಯಂಗಳಿಗೆ ಭೇಟಿಕೊಟ್ಟೆವು. ಇವುಗಳಲ್ಲಿ ಇರಾನಿನ ಮಶಾದ್ ನಗರದಲ್ಲಿ, ಶಿಯಾ ಪಂಥದ ಆಧ್ಯಾತ್ಮಿಕ ನಾಯಕ ಅಲ್‌ರೆಝಾ ಸಮಾಧಿಗೆ ಲಗತ್ತಾಗಿ ರತ್ನಗಂಬಳಿಗಳ ಮ್ಯೂಸಿಯಂ ಒಂದು. ಅಝುರಬೈಜಾನಿನ ಬಾಕು ನಗರದಲ್ಲಿ ರತ್ನಗಂಬಳಿ ಸುರುಳಿಯ ವಿನ್ಯಾಸದಲ್ಲಿ ಕಟ್ಟಿರುವ ರತ್ನಗಂಬಳಿಯ ಮ್ಯೂಸಿಯಂ ಮತ್ತೊಂದು. ಮಶಾದಿನಲ್ಲಿ ತಿಕೀಟಿಗೆ ತಲಾ ಐದುಸಾವಿರ ರಿಯಾಲ್ ತೆತ್ತು ನಾನು ಬಾನು ಹೋದೆವು. ಅಲ್ಲಿ ಇರಾನಿನ ಕೋಮ್ ಖುರಾಸಾನ್ ಸೆಹವಾನ್ ಕುರ್ದಿಸ್ಥಾನ್ ಪ್ರಾಂತ್ಯಗಳಲ್ಲಿ ತಯಾರಾದ ರತ್ನಗಂಬಳಿಗಳನ್ನು ಇಡಲಾಗಿತ್ತು. ಬಾಕು ಮ್ಯೂಸಿಯಂನಲ್ಲಿ ಚೀನಾದಿಂದ ಆಮದಾದ ರೇಷ್ಮೆದಾರದ ಉಂಡೆಗಳನ್ನೂ ರೇಷ್ಮೆವಸ್ತ್ರಗಳನ್ನೂ ಪ್ರದರ್ಶಿಸಲಾಗಿತ್ತು. ಬಾಕು ಮ್ಯೂಸಿಯಂನಲ್ಲಿ ಕಂಬಳಿ ತಯಾರಿಕೆಯ ಡಾಕ್ಯುಮೆಂಟರಿಯನ್ನು ಅಲ್ಲಿದ್ದ ಥಿಯೇಟರಿನಲ್ಲಿ ನೋಡಬಹುದಿತ್ತು. ಎರಡೂ ಮ್ಯೂಸಿಯಂಗಳಲ್ಲಿ ಸ್ಥಳೀಯ ಕುರಿಗಳ ಉಣ್ಣೆ ಮತ್ತು ಮತ್ತು ಚೀನಾದ ರೇಷ್ಮೆಯನ್ನು, ಅವಕ್ಕೆ ಬಣ್ಣಕೊಡುವ ಬಣ್ಣಗಾರಿಕೆಯನ್ನೂ, ನೂಲಲಡಿ, ತಕಲಿ, ಚರಕ, ಮಗ್ಗ, ಮಗ್ಗದ ಬಾಚಣಿಗೆಗಳನ್ನೂ ಇಡಲಾಗಿತ್ತು.

ರತ್ನಗಂಬಳಿಗಳು ಈ ಭೂಖಂಡದ ರೇಷ್ಮೆಸಾಕಣೆ, ಕುರಿಸಾಕಣೆ, ನೇಕಾರಿಕೆ, ವ್ಯಾಪಾರಗಳ ನಾಲ್ಕು ಚುಕ್ಕಿಗಳನ್ನು ಒಗ್ಗೂಡಿಸಿರುವ ಕಲಾಕೃತಿಗಳು. ಇವು ಆಯಾ ದೇಶದ ಚಿತ್ರಕಲೆಗೆ ಕ್ಯಾನವಾಸುಗಳೂ ಆಗಿವೆ. ಇವು ಕುಶಲಕರ್ಮಿಗಳ ಕಲ್ಪನೆ, ಸಂಸ್ಕೃತಿ ಪ್ರಜ್ಞೆ, ಕರಾರುವಾಕ್ಕಾದ ಗಣಿತಜ್ಞಾನ, ಚಿತ್ರಕಲಾ ಪ್ರತಿಭೆ ಮತ್ತು ನೇಕಾರಿಕೆಯ ಕಸುಬುದಾರಿಕೆಗಳ ಮೂಲಕ ಸೃಷ್ಟಿಯಾಗಿದ್ದವು. ಕೆಲವು ಕಂಬಳಿಗಳು ರತ್ನದೀಪಗಳನ್ನು ಹಚ್ಚಿಟ್ಟ ಅಂಗಳದಂತೆ. ಚಿನ್ನದ ಒಡವೆಗಳನ್ನು ಚಾಪೆಯ ಮೇಲೆ ಹರಡಿದಂತೆ. ಕೆಲವು ಫಾರಸಿ ಕವಿಗಳ ಕಾವ್ಯದ ಚರಣಕ್ಕೆ ಭಿತ್ತಿ ಒದಗಿಸಿದ್ದವು. ಗಾತ್ರದಲ್ಲಿ ಕೆಲವು ಕಾಲೊರೆಸಿನಷ್ಟು ಚಿಕ್ಕವಾಗಿದ್ದರೆ, ಮತ್ತೆ ಕೆಲವು ಸಭಾಭವನಕ್ಕೆ ಅಥವಾ ಮಸೀದಿಗೆ ಹಾಸುವಷ್ಟು ಹರಹಾಗಿದ್ದವು. ಮಶಾದ್ ಮ್ಯೂಸಿಯಮ್ಮಿನಲ್ಲಿ ಇರಾನಿನಲ್ಲಿ ದೊರೆಗಳ ಹಾಗೂ ಆಧ್ಯಾತ್ಮಿಕ ನಾಯಕರ ಚಿತ್ರಗಳುಳ್ಳ ರತ್ನಗಂಬಳಿಗಳಿದ್ದವು. ಒಂದು ಕಂಬಳಿಯಲ್ಲಿ ಮುಸ್ಲಿಮರ ಯಾತ್ರಾ ಸ್ಥಳಗಳಾದ ಮಕ್ಕಾ ಮದೀನ ಜೆರುಸಲೆಂನ ಮಸೀದಿಗಳಿದ್ದವು. ಮೊಹರಮ್ಮಿಗೆ ಸಂಬಂಧಿಸಿದ ಕರ್ಬಲಾ ನಜಫ್‌ಗಳ ಹುತಾತ್ಮರ ಸಮಾಧಿ ಕಟ್ಟಡಗಳ ಚಿತ್ರಗಳಿದ್ದವು. ಧಾರ್ಮಿಕ ಸನ್ನಿವೇಶವುಳ್ಳ ಚಿತ್ರಗಳುಳ್ಳ ರತ್ನಗಂಬಳಿಗಳನ್ನು ನೆಲಕ್ಕೆ ಹಾಸದೆ, ಕಿಟಕಿಯ ಪರದೆಗಳಾಗಿ ಅಥವಾ ಗೋಡೆನೇತುಗಳಾಗಿ ಬಳಸುವರು ಎಂದು ಕಾಣುತ್ತದೆ.

ಕೆಲವು ಕಂಬಳಿಗಳ ಮೇಲೆ ವಿಮಾನದಿಂದ ವಿಹಂಗಮ ನೋಟದಲ್ಲಿ ತೆಗೆದ ಪಟದಂತೆ, ಇರಾನಿನ ಪಾರಂಪರಿಕ ಊರುಗಳೂ, ಅಲ್ಲಿನ ಜೀವನಕ್ರಮವೂ ಚಿತ್ರಿತವಾಗಿದ್ದವು. ಜಿಂಕೆಬೇಟೆ, ವನವಿಹಾರ, ಹಬ್ಬಿದ ದ್ರಾಕ್ಷಿಬಳ್ಳಿ, ವಿಹರಿಸುವ ಪ್ರಾಣಿ–ಪಕ್ಷಿ, ನೇಗಿಲುಳುವ ರೈತರ ಸನ್ನಿವೇಶಗಳಿದ್ದವು. ಕಂಬಳಿಗೆ ಬೇಕಾದ ತುಪ್ಪಟವನ್ನು ಒದಗಿಸಿದ ಕುರಿಗಳು, ತಮ್ಮ ಮಾಲಕರ ಸಮೇತ ಚಿತ್ರಗಳಾಗಿ ಪ್ರವೇಶ ಪಡೆದಿದ್ದವು. ಮರುಭೂಮಿ ದೇಶಗಳಲ್ಲಿ ಕುರಿಗಾಹಿತನ ಪ್ರಮುಖ ಆರ್ಥಿಕತೆ ಕೂಡ. ರತ್ನಗಂಬಳಿಗಳಲ್ಲಿ ನವಿಲು ಜಿಂಕೆ ಹಕ್ಕಿ ಕುದುರೆ ಸಿಂಹಗಳು ಸಾಮಾನ್ಯವಾಗಿದ್ದವು. ಕಾಲ್ಪನಿಕ ಪಕ್ಷಿಯೊಂದು ತನ್ನ ನಾಲ್ಕು ಕಾಲುಗಳಲ್ಲಿ ಒಂದೊಂದು ಆನೆಯನ್ನು ಹಿಡಿದು ಹಾರುತ್ತಿತ್ತು. ಈ ಸನ್ನಿವೇಶವು ಭಾರತದ ಗುಡಿಗಳ ಭಿತ್ತಿಗಳಲ್ಲೂ ಕೆತ್ತಲ್ಪಟ್ಟಿದೆ. ಹೆಚ್ಚಿನ ರತ್ನಗಂಬಳಿಗಳಲ್ಲಿ ಮರದ ಮೇಲೆ ಸಭೆ ಸೇರಿರುವ ಹಕ್ಕಿಗಳು ಹಣ್ಣು ತಿನ್ನುತ್ತ ವಿಹರಿಸುತ್ತಿವೆ. ಹಕ್ಕಿಗಳು ಸೂರೆ ಹೊಡೆದಿರುವ ಖರ್ಜೂರದ ತೋಟಗಳನ್ನು ನೋಡಿದ್ದ ನಮಗಿದು ಉತ್ಪ್ರೇಕ್ಷೆ ಅನಿಸಲಿಲ್ಲ.

ಮಶಾದಿನ ಒಂದು ರತ್ನಗಂಬಳಿಯಲ್ಲಿ ಸಂಗೀತಗಾರರು ದುಂಡಗೆ ಕೂತು ವಾದ್ಯ ನುಡಿಸುವ ಸನ್ನಿವೇಶವಿತ್ತು. ಅವರ ಸುತ್ತಲೂ 12 ರಾಶಿಗಳಿಗೆ ಸಂಬಂಧಿಸಿದ ಪ್ರಾಣಿ ಪಕ್ಷಿ ವಸ್ತುಗಳ ಚಿಹ್ನೆಗಳಿದ್ದವು. ಭಾರತಕ್ಕೆ ಜನ್ಮರಾಶಿಗಳು ಇಲ್ಲಿಂದ ಬಂದವೊ ಭಾರತದಿಂದ ಹೋದವೊ ತಿಳಿಯದು. ಒಂದು ರತ್ನಗಂಬಳಿಯಲ್ಲಿ ಹೋದೋಟವಿದ್ದು, ಅದರಲ್ಲಿ ಕುಟುಂಬವೊಂದು ಹೊರಸಂಚಾರಕ್ಕೆ ಬಂದು, ಕೂಡುಭೋಜನ ಮಾಡುವಲ್ಲಿ ಮಗ್ನವಾಗಿತ್ತು. ಬೇಟೆಚಿತ್ರಗಳಲ್ಲಿ ಬೇಟೆಗಾರರು ಬಂಡಿಯಲ್ಲಿ ಚಿರತೆಯನ್ನು ಸರಪಳಿಯಲ್ಲಿ ಕಟ್ಟಿಹಾಕಿ ಒಯ್ಯುವ ಸನ್ನಿವೇಶವಿತ್ತು. ಕೆಲವೆಡೆ ಪರ್ಶಿಯನ್ ಕವಿಗಳ ಮತ್ತು ಸೂಫಿಗಳ ಜೀವನ ಪ್ರಸಂಗಗಳು ಇದ್ದವು. ಕೆಲವು ಕಂಬಳಿಗಳಲ್ಲಿ ಕುರಾನಿನ ಮಂತ್ರಗಳನ್ನು ನೇದು, ಅವುಗಳ ಸುತ್ತ ಚಿಟ್ಟೆ ಹಕ್ಕಿ ಹೂವು ಬಳ್ಳಿಗಳನ್ನು ಬಿಡಿಸಲಾಗಿತ್ತು. ಬಳ್ಳಿ ಹೂವು ಎಲೆ ಹಣ್ಣುಗಳಿಲ್ಲದ ಕಂಬಳಿಗಳೇ ಇಲ್ಲವೆನ್ನಬಹುದು. ಮರುಭೂಮಿಯ ನಾಡುಗಳು ರತ್ನಗಂಬಳಿಗಳಲ್ಲಿ ಹೂವು ಹಕ್ಕಿ ಚಿಟ್ಟೆ ಮರಗಿಡ ಹೂವು ಹಣ್ಣುಗಳನ್ನು ಸಮೃದ್ಧವಾಗಿ ಕಾಣಿಸಿದ್ದವು. ಕಲೆ ಕೇವಲ ವಾಸ್ತವದ ಪ್ರತಿಬಿಂಬವಲ್ಲ. ಇಲ್ಲದುದನ್ನು ಆವಾಹಿಸುವ ಕಲ್ಪನೆ ಕನಸು ಕೂಡ.

ಬುಡಕಟ್ಟು ಸಮಾಜದ ವಿಗ್ರಹಾರಾಧಕ ಅರಬಸ್ತಾನವು ನಿರಾಕಾರವಾದಿ ದೈವಕಲ್ಪನೆಯ ಇಸ್ಲಾಮನ್ನು ಸ್ವೀಕರಿಸಿದ ಬಳಿಕ, ಚಿತ್ರಕಲೆ ಮತ್ತು ಶಿಲ್ಪಕಲೆಗಳನ್ನು ನಿಷೇಧಿಸಿಕೊಂಡಿತು. ಇದು ಸೃಷ್ಟಿಕರ್ತ ದೇವರ ಸೃಜನಶೀಲತೆಗೆ ಸವಾಲು ಹಾಕುವ ಕೆಲಸವೆಂದು ಪರಿಭಾವಿಸಿತು. ತನ್ನ ಸೃಜನಶೀಲತೆಗೆ ತಾನೇ ಕಟ್ಟು ಹಾಕಿಕೊಂಡಿತು. ಈ ಸೃಜನಶೀಲತೆ ವಾಸ್ತುಶಿಲ್ಪದಲ್ಲಿ ಸ್ವಚ್ಛಂದವಾಗಿ ಹೊಮ್ಮಿತು. ಆದರೆ ಅಗ್ನಿಪೂಜಕ ಸಂಸ್ಕೃತಿಯ ಹಿನ್ನೆಲೆಯಿಂದ ಇರಾನ್ ಮತ್ತು ಅಝುರಬೈಜಾನುಗಳು, ಶಿಯಾ ಪಂಥೀಯ ದೇಶಗಳಾಗಿ, ಈ ವಿಷಯದಲ್ಲಿ ವಿಭಿನ್ನ ನಿಲುವು ತಾಳಿದವು. ಪರಂಪರಾಗತವಾಗಿ ಬಂದಿದ್ದ ತಮ್ಮ ಚಿತ್ರಕಲೆ ಸಂಗೀತ ಜೀವನಕ್ರಮಗಳನ್ನು ರತ್ನಗಂಬಳಿಗಳಲ್ಲಿ ಪ್ರಕಟಿಸಿದವು. ರತ್ನಗಂಬಳಿಯ ಕಸುಬುದಾರಿಕೆಯು ನೆಲಹಾಸುಗಳಿಗೆ ನಿಲ್ಲಲಿಲ್ಲ. ಕುದುರೆಯ ಬೆನ್ನಹಾಸು, ಅದರ ಹಸುಬೆಚೀಲ, ಸಂತರ ಸಮಾಧಿಗೆ ಹೊದಿಸುವ ಗಲೀಫ, ನಮಾಜಿಗೆ ಬಳಸುವ ಪ್ರಾರ್ಥನಾಹಾಸು, ಗಂಡಸರ ಕುಲಾವಿ, ಬಾಗಿಲಪರದೆಗಳಿಗೆ ವಿಸ್ತರಣೆಗೊಂಡಿತ್ತು. ರತ್ನಗಂಬಳಿಯ ಬಣ್ಣಗಾರಿಕೆ ಮತ್ತು ಚಿತ್ರವಿನ್ಯಾಸಗಳನ್ನು, ಮಸೀದಿಗಳ ಮೀನಾರ, ದರ್ಗಾದ ಗುಂಬಜ್, ಕೋಟೆಯ ಕಮಾನು, ಪಿಂಗಾಣಿಯ ಪಾತ್ರೆ, ತಾಮ್ರದ ಹೂಜಿ, ಮಹಿಳೆಯರ ಸೊಂಟಪಟ್ಟಿಗಳೂ ಹಂಚಿಕೊಂಡಿದ್ದವು. ಕುರಾನಿನ ಪವಿತ್ರ ಮಂತ್ರಗಳನ್ನು ಅರಬ್ಬಿ ಅಕ್ಷರಗಳನ್ನು ಬಿಡಿಸುವ ವಿಷಯದಲ್ಲಿ ಕೋಟೆಗೋಡೆ, ದರ್ಗಾದ ಗುಂಬಜಿನ ಒಳಮಾಡು, ಮಸೀದಿಯ ಮೀನಾರು, ರತ್ನಗಂಬಳಿಗಳು ಸಮಾನ ಭಿತ್ತಿಯಾಗಿ ಮೈಯೊಡ್ಡಿದ್ದವು. ರತ್ನಗಂಬಳಿಯ ನೇಕಾರರಿಗೂ, ಕಟ್ಟಡದ ಕೆಲಸಗಾರರಿಗೂ ಲೋಹಕಾರರಿಗೂ ಬಡಗಿಗಳಿಗೂ ಶಿಲ್ಪಕಾರರಿಗೂ ಹಿನ್ನೆಲೆಯಾಗಿ ಸಮಾನವಾದ ಸೌಂದರ್ಯ ಮೀಮಾಂಸೆ ಇದ್ದಂತೆ ತೋರುತ್ತದೆ.ನಮಗೆ ಮಧ್ಯ ಏಶಿಯಾದ ಸಂಸ್ಕೃತಿ ನಾಗರಿಕತೆಗಳ ಛಾಯಾಚಿತ್ರಗಳಂತೆ ರತ್ನಗಂಬಳಿಗಳು ಭಾಸವಾದವು. ಅಝುರಬೈಜಾನ್ ಇರಾಕ್ ಇರಾನಿನ ರತ್ನಗಂಬಳಿಗಳು ತಮ್ಮ ದೇಶಗಳ ಚರಿತ್ರೆಗೂ ವರ್ತಮಾನಕ್ಕೂ ಸೇತುವೆಯಂತೆ ತೋರಿದವು.

ಯಾವುದೇ ನಾಡಿನ ಕರಕುಶಲ ಕಲೆಗಳು ಅದರ ಸಾಮುದಾಯಿಕ




ಸೌಂದರ್ಯ ಪ್ರಜ್ಞೆಯ ಪ್ರತೀಕಗಳು; ಅಲ್ಲಿನ ಆರ್ಥಿಕತೆಯ ಕನ್ನಡಿಗಳು; ಒಂದು ದೇಶದ ಚರಿತ್ರೆ ಮತ್ತು ವರ್ತಮಾನವನ್ನು ಅದರ ರಾಜಕೀಯ ವಿದ್ಯಮಾನಗಳ ಮೂಲಕ ನೋಡುವ ನಮ್ಮ ಸುದ್ದಿಗಾರಿಕೆ ಮತ್ತು ಚರಿತ್ರೆಯ ಬರವಣಿಗೆಗಳ ಕ್ರಮವು ಜನಪ್ರಿಯವಾಗಿದೆ. ಈ ಚರಿತ್ರೆ ಮತ್ತು ವರ್ತಮಾನಗಳನ್ನು ಅಲ್ಲಿನ ಕಲೆಗಳ ಮೂಲಕ ನೋಡಿದರೆ, ದೇಶಗಳು ಬೇರೆಯೇ ಆಗಿ ಗೋಚರಿಸುತ್ತವೆ. ಯಾಕೆಂದರೆ, ಕುಶಲಕಲೆಗಳು ಪ್ರಭುತ್ವದ ಅಧಿಕಾರ, ಧರ್ಮಗಳ ಶ್ರದ್ಧೆ, ವ್ಯಾಪಾರದ ತಿರುಗಾಟ, ಸಂತರ ಅಧ್ಯಾತ್ಮ, ಪಶುಪಾಲನೆಯ ಕಷ್ಟ, ಸಮುದಾ ಯಗಳ ಲೋಕದೃಷ್ಟಿ ಮತ್ತು ಸೃಜನಶೀಲತೆಗಳನ್ನು ಏಕೀಭವಿಸಿರುತ್ತವೆ.

ರಾಜರಾಳಿಕೆಯಿದ್ದಾಗ ರತ್ನ ಗಂಬಳಿಗಳಿಗೆ ರಾಜರು ಸಿರಿವಂತರು ವ್ಯಾಪಾರಿಗಳು ಪ್ರಮುಖ ಗ್ರಾಹಕರಾಗಿದ್ದರು. ಈಗ ಅವನ್ನು ಕೊಳ್ಳುತ್ತಿರುವ ಸುಕುಮಾರಸ್ವಾಮಿಗಳೇ ಬೇರೆ. ನಾನು–ಬಾನು ಅಮೆರಿಕೆಯಲ್ಲಿದ್ದಾಗ ಹಾಗೂ ಯೂರೋಪಿನ ದೇಶಗಳಲ್ಲಿ ತಿರುಗಾಡುವಾಗ, ಮಧ್ಯ ಏಶಿಯಾದ ರತ್ನಗಂಬಳಿ ಮಾರುವ ಬೃಹತ್ ಮಳಿಗೆಗಳನ್ನು ನೋಡಿದೆವು. ಸಿಲ್ಕರೂಟಿನ ಸರಕು ಸಾಗಣೆ ಪಥ ಮಾತ್ರವಲ್ಲ, ಗ್ರಾಹಕರೂ ಬದಲಾಗಿದ್ದರು. ನಮಗೆ ಈ ರತ್ನಗಂಬಳಿ ನೇಯುವ ಜಾಗಗಳಿಗೆ ಹೋಗಲು ಸಾಧ್ಯವಾಗಲಿಲ್ಲ. ಸಾಧ್ಯವಾಗಿದ್ದರೆ, ಕಂಬಳಿಕಾರರ ಕಷ್ಟಸುಖ ಕೇಳಬಹುದಿತ್ತು. ಲಂಬವಾಗಿ ಇಳಿಬಿದ್ದ ರೇಷ್ಮೆ ಮತ್ತು ಉಣ್ಣೆಯ ನೂಲುಗಳ ಹಾಸಿನೊಳಗೆ ಬೆರಳು ಹೊಗಿಸಿ, ಬಣ್ಣಬಣ್ಣದ ನೂಲುಗಳನ್ನು ಪೋಣಿಸಿ ಗಂಟುಹಾಕಿ ಚಕ್ಕನೆ ಕತ್ತರಿಸುವ, ಅವರ ಕಸುಬುದಾರಿಕೆ ನೋಡಸಿಗುತ್ತಿತ್ತು; ಕಣ್ಣಮುಂದೆ ಅಂಕಿಸಂಖ್ಯೆಗಳ ಮತ್ತು ವಿನ್ಯಾಸಗಳ ನಕ್ಷೆಯನ್ನು ಇಟ್ಟುಕೊಂಡು, ನೂಲಿನೊಳಗೆ ಆಕೃತಿಗಳನ್ನು ಬಿಡಿಸುವ ಅವರ ಚಾಕಚಕ್ಯತೆಯ ದರ್ಶನ ಸಿಗುತ್ತಿತ್ತು; ಅವರು ವರ್ಷಗಟ್ಟಲೆ ಒಂದೊಂದು ಕಂಬಳಿ ನೇಯುವಾಗ, ಅದು ದುಡಿಮೆ ಮಾತ್ರವಲ್ಲ, ಧ್ಯಾನಸ್ಥವಾದ ಅವಸ್ಥೆಯಲ್ಲಿ ಸಾಧಿಸಿರುವ ಆಧ್ಯಾತ್ಮ ಎಂಬುದು ತಿಳಿಯುತ್ತಿತ್ತು. ಕಬೀರ್, ಮನ್ಸೂರ್ ಹಲ್ಲಾಜ್, ಮೊದಲಾಗಿ ಜಗತ್ತಿನ ಬಹುತೇಕ ಸಂತರು ನೇಕಾರ ಮೂಲದಿಂದ ಬಂದವರು ಎಂಬುದು ಆಕಸ್ಮಿಕವಲ್ಲ. (ಸುಧಾ)

## ಕವಿ ಮನಸು

### ಅನಾಥ



ಹಡೆದೆ ಏತಕೆ ಅಮ್ಮ ನನ್ನನು
ನಡುವೆ ತೆರಳುವುದಾದರೆ
ಒಡಲ ಹೊರಗಡೆ ನೀನು ತಂದುದು
ಪಡುತಲಿರುವೆನು ತೊಂದರೆ

ಮಡಿಲನೇರುವ ಭಾಗ್ಯ ನೀಡದೆ
ನಡೆದೆ ಯೋಚನೆ ಮಾಡದೆ
ಹಿಡಿದು ಮುದ್ದಿಪರಿರದ ಬದುಕಿದು
ನುಡಿಯಲಾರಲಿ ಅರಿಯದೆ

ತುತ್ತು ಉಣಿಸುವರಿಲ್ಲ ಬಾಳಲಿ
ಹತ್ತು ಹಲವಿದೆ ವೇದನೆ
ಸುತ್ತ ಮಂದಿಯು ಹಲವರಿದ್ದರು
ಇತ್ತ ನಾನಿಹೆ ಒಬ್ಬನೆ

ಕರೆದು ಮಲಗಿಸಿ ಲಾಲಿ ಹಾಡಲು
ಬರುವರಿಲ್ಲದನಾಥನು
ಮರುಕ ಪಡುವವರಿಲ್ಲ ಬಾಳಲಿ
ಇರುಳ ಭಯದಲಿ ನೊಂದೆನು

ನಿನ್ನ ರೂಪವ ಮನದೆ ಕಲ್ಪಿಸಿ
ಮುನ್ನ ಎಳೆಯುವೆ ರೇಖೆಯ
ನಿನ್ನ ಮಡಿಲಿನ ಸ್ವರ್ಗ ನೆನೆಯುತ
ಚೆನ್ನ ಮಾಡುವೆ ನಿದ್ರೆಯ॥

– ಪೆರ್ಮುಖ ಸುಬ್ರಹ್ಮಣ್ಯ ಭಟ್

### ಸೇರಿಗೆ ಸವಾಸೇರು

ನೀ ನನ್ನ ಕೆಣಕಿದರೆ
ನಾ ನಿನ್ನ ಕೆಣಕುವೆ
ನೀ ಸುಮ್ಮನಿದ್ದರೆ
ನಾ ಸುಮ್ಮನಿರುವೆ।

ನಾನು ಅಧಿಕಾರದಲ್ಲಿರುವೆ
ನೀನು ಅಧಿಕಾರದಲ್ಲಿರುವೆ
ನಾನು ಬ್ರಷ್ಟನಾಗಿರುವೆ
ನೀನು ಬ್ರಷ್ಟನಾಗಿರುವೆ.।

ನೀನು ಆಸ್ತಿ ಮಾಡಿರುವೆ
ನಾನು ಆಸ್ತಿ ಮಾಡಿರುವೆ
ನೀನು ಮೋಸಗಾರ
ನಾನು ಮೋಸಗಾರ।

ನೀನು ಆಶ್ವಾಸನೆ ಕೊಡುವೆ
ನಾನು ಆಶ್ವಾಸನೆ ಕೊಡುವೆ
ನಾವು ಸುಳ್ಳರು ಜನರಿಗೆ ಗೊತ್ತು
ಆದರೂ ಜನರಲ ತೋರೋಣ ಗತ್ತು।

ನಿನ್ನಾಟ ನಿತ್ಯ ನೋಡುವರು
ನನ್ನಾಟವನು ನೋಡುವರು
ನನ್ನ ನಿನ್ನ ಬೈಯ್ಯುವರು
ಮುಂದೊಂದು ದಿನ ದೂಡುವರು।

ನಡೆದಷ್ಟು ದಿನ ಆಟ ಆಡುವಾ
ನಾವು ಒಂದೆಂಬಂತೆ ಇರುವಾ
ಟೀಕೆ ಟಿಪ್ಪಣಿ ಇಬ್ಬರಲ್ಲಿ ಬೇಡ
ಇನ್ನೊಬ್ಬರೆದುರು ಜರಿಯುವುದು ಬೇಡ।

ನಮ್ಮ ನರಿ ಬುದ್ದಿ ಎಲ್ಲರಿಗೂ ಗೊತ್ತು
ಏನೂ ಅರಿಯದಂತೆ ಇರೋಣ ಯಾವತ್ತು
ಜನ ಬೈದರೂ ಕೇಳದಂತೆ ಇರೋಣ
ಅವಧಿ ಮುಗಿಸಿ ಮನೆಗೆ ಹೋಗೋಣ।

– ಚಂದ್ರಶೇಖರಯ್ಯ ರೋಣದಮಠ

ಹಂಪಿ ಟೈಮ್ಸ್
ವಿಜಯನಗರದ ಹೆಮ್ಮೆ
ಸ್ಥಳೀಯ ಸುದ್ದಿಗಳಿಗಾಗಿ ಭೇಟಿ ನೀಡಿ
www.hampitimes.com
epaper.hampitimes.com

# ವಿಜ್ಞಾನ ಸಂಪನ್ಮೂಲ ವಿಶೇಷ ಚೇತನ ಶಿಕ್ಷಕ ಅನುಕಂಪಕ್ಕಿಂತ ಆಸರೆಯಾದ ಬಾಳಪ್ಪ ತೊಪಣ್ಣ

ಕೇವಲ ಪಾಠ ಮಾಡಿ ನನ್ನ ಅವಧಿ ಮುಗಿಯಿತು, ಪೆರಿಯೆಡ್ ಹೇಳಿ ಸಿಲೆಬಸ್ ಮುಗಿಸಿದರೆ ನನ್ನ ಕರ್ತವ್ಯ ಮುಗಿತು ಎಂದು ಕುಳಿತುಕೊಳ್ಳುವ ಪ್ರವೃತ್ತಿಯ ವ್ಯಕ್ತಿತ್ವದ ವ್ಯಕ್ತಿ ನಡುವೆ ಇಲ್ಲೊಬ್ಬ ವಿಷೇಶ ಶ್ರಮ ಜೀವಿ, ಹಸನ್ಮುಖಿ, ಗಂಭೀರ ಸ್ವಭಾವದ ವಿಶೇಷ ಶಿಕ್ಷಕರು. ಯಾವಾಗಲು ಚೇಷ್ಟೆ ಮಾಡುತ್ತ ಎಲ್ಲರ ಜೊತೆಗೆ ತಮ್ಮ ವೃತ್ತಿ ನಿಷ್ಠೆ ಮೆರೆಯುತ್ತಿರುವ. ವಿಶೇಷ ಚೇತನರೂ ಆದ B T ಹಳ್ಳಿ ಇವರ ಸೇವೆ ಅಸಾಧಾರಣ. ರಾಜ್ಯ ಮಟ್ಟದಲ್ಲಿ ವಿಜ್ಞಾನ ಸಂಪನ್ಮೂಲಗಳ ವ್ಯಕ್ತಿಯಾಗಿ ಸೇವೆ ಸಲ್ಲಿಸುತ್ತಿರುವ ಇವರು ವಿದ್ಯಾರ್ಥಿಗಳ ಅಚ್ಚುಮೆಚ್ಚಿನ ಶಿಕ್ಷಕರು, ಪರಿಪೂರ್ಣ ಜ್ಞಾನ ಹೊಂದಿದ ಶಿಕ್ಷಕರು ಮಾತ್ರ ಉತ್ತಮ್ಮ ಶಿಕ್ಷಕರು ಆಗಲು ಸಾಧ್ಯ.

ಗ್ರಾಮೀಣ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ಮಾಡಿ IT ಕ್ವಿಜ್ ನಲ್ಲಿ ವಿಭಾಗಮಟ್ಟದಲ್ಲಿ ಪ್ರಥಮ ಸ್ಥಾನ ಪಡೆಯಲು ಕಾರಣಿಕರ್ತರು ಆದ ಶ್ರೀ.ಬಾಳಪ್ಪ ತೊಪಣ್ಣ ಹಳ್ಳಿ ಮೂಲತಃ ಬಾಗಲಕೋಟೆ ಜಿಲ್ಲೆಯ ಬಾದಾಮಿ ತಾಲೂಕಿನ ಮುತ್ತಲಗೇರಿ ಗ್ರಾಮದಲ್ಲಿ ದಿನಾಂಕ 31.07.1985 ರಲ್ಲಿ ತೊಪಣ್ಣ ಹಳ್ಳಿ ಹಾಗೂ ಫಕೀರಮ್ಮ ಹಳ್ಳಿ ದಂಪತಿಗಳ 3 ನೇ ಮಗನಾಗಿ ಜನಿಸಿದರು.

5 ಜನ ಸಹೋದರರು 4 ಜನ ಸಹೋದರಿಯರು ಇರುವ ದೊಡ್ಡ ಕುಟುಂಬ, ಮೂಲತಃ ರೈತ ಕುಟುಂಬದಲ್ಲಿ ಜನಿಸಿದ ಇವರಿಗೆ ಚಿಕ್ಕವರಿರುವಾಗಲೇ ಓದಿನಲ್ಲಿ ತುಂಬಾ ಆಸಕ್ತಿ ಇತ್ತು. ಇವರ ಪ್ರಾಥಮಿಕ ಶಿಕ್ಷಣ ಸ. ಹಿ. ಪ್ರಾ. ಶಾಲೆ ಮುತ್ತಲಗೇರಿ ಪ್ರೌಢ, ಹಾಗೂ ಪದವಿಪೂರ್ವ, ಶಿಕ್ಷಣ ಹಾಗೂ BSc ಪದವಿ ವೀರ ಪುಲಕೇಶಿ ಸಂಯುಕ್ತ ಪದವಿಪೂರ್ವ ಶಿಕ್ಷಣ ಸಂಸ್ಥೆ ಮುತ್ತಲಗೇರ. MSc (ಜೀವಶಾಸ್ತ್ರ) ಕುವೆಂಪು ಮುಕ್ತ ವಿಶ್ವ ವಿದ್ಯಾಲಯದಲ್ಲಿ ಪಡೆದಿರುತ್ತಾರೆ.



ನಂದಿನಿ ಸನಬಾಲ್
ಶಿಕ್ಷಕಿ, ಗುಲ್ಬರ್ಗಾ

Scan For Digital Colourful
HAMPI TIMES E-paper

2013 ರಲ್ಲಿ ಬಾಳಪ್ಪ ಹಳ್ಳಿ ಮೇಘಾ ಇವರೊಂದಿಗೆ ವಿವಾಹ ಆದರು, ಇವರಿಗೆ ಪ್ರಜ್ವಲ್, ಸುಮೆದಾ ಹಾಗೂ ಪ್ರಕುಲ್ ಮುದ್ದಾದ ಮಕ್ಕಳು ಇದ್ದಾರೆ. ದಿನಾಂಕ 01.08.2013 ರಲ್ಲಿ ಸರಕಾರಿ ಪ್ರೌಢ ಶಾಲೆ ಬೆಳವಲಕೊಪ್ಪ ತಾ/ಬಾದಾಮಿ ಜಿ/ ಬಾಗಲಕೋಟೆ ಯಲ್ಲಿ ಸೇವೆಗೆ ಸೇರಿದ ಇವರು 11 ವರ್ಷಗಳ ಸೇವೆ ಸಲ್ಲಿಸಿ, ಈಗ ಶಿಕ್ಷಣ ಸಂಯೋಜಕರಾಗಿ (ECO) ಬಾದಾಮಿ ತಾಲೂಕಿನ ಕ್ಷೇತ್ರ ಶಿಕ್ಷಣಾಧಿಕಾರಿಗಳ ಕಾರ್ಯಾಲಯದಲ್ಲಿ ಸೇವೆ ಸಲ್ಲಿಸುತ್ತಿದ್ದಾರೆ.



ನಾನು ವಿಶೇಷಚೇತನ ಶಿಕ್ಷಕ ಎನ್ನುತ ಎಲ್ಲರ ಗಮನ ಸೆಳೆದು ಅನುಕಂಪಕ್ಕೆ ಆಸೆ ಪಟ್ಟವರಲ್ಲ, ಯಾವತ್ತಿಗೂ ತಮ್ಮ ಸೇವೆಯನ್ನು ವಿದ್ಯಾರ್ಥಿಗಳಿಗೆ ಮೀಸಲಾಗಿಟ್ಟವರು. ಸಾಮಾನ್ಯ ಶಿಕ್ಷಕರ ಹಾಗೆ ಕೇವಲ ಪಾಠ ಮಾಡಿ ಮನೆಗೆ ಹೋಗುವ ಪ್ರವೃತ್ತಿ ಇವರದಲ್ಲ. ಇವರು ಮಕ್ಕಳ ಸರ್ವಂಗಿಣ ಬೆಳವಣಿಗೆಗೆ ಮಾರ್ಗದರ್ಶನ ನೀಡುತ್ತಿರುವ ಶಿಕ್ಷಕರು. ಶಿಕ್ಷಣ ಇಲಾಖೆಯಲ್ಲಿ ನಮ್ಮ ಸರಕಾರ ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗಾಗಿ ನಡೆಸುತ್ತಿರುವ ಅನೇಕ ಸ್ಪರ್ಧೆಗಳಿಗೆ ಮಕ್ಕಳಿಗೆ ಮಾರ್ಗದರ್ಶನ ಮಾಡಿ ಪಾಲ್ಗೊಳ್ಳುವಂತ್ತೆ ಮಾಡುವ ಮಾತೃಹೃದಯಿ ಶಿಕ್ಷಕರು ಆಗಿದ್ದಾರೆ. ಇವರ ಮಾರ್ಗದರ್ಶನದಲ್ಲಿ ವಿಜ್ಞಾನ ರಸಪ್ರಶ್ನೆ ಕಾರ್ಯಕ್ರಮಗಳು, ವಿಜ್ಞಾನ ವಿಷಯಕ್ಕೆ ಸಂಬಂಧಿಸಿದ ನಾಟಕಗಳು ಜಿಲ್ಲಾ ಮಟ್ಟದಲ್ಲಿ ಪ್ರಥಮ ಸ್ಥಾನ ಪಡೆದಿರುವುದು ಮೆಚ್ಚುವಂತಹದು. ಇವರ ಮಾರ್ಗದರ್ಶನದಲ್ಲಿ ಪ್ರತಿವರ್ಷ ನೆಡೆಯುವ ವಿಜ್ಞಾನ ಇನ್ಸ್ಪೈರ್ ಅವಾರ್ಡ್ ನಲ್ಲಿ ವಿದ್ಯಾರ್ಥಿಗಳು 2 ಬಾರಿ ಜಿಲ್ಲಾ ಮಟ್ಟದಲ್ಲಿ ಆಯ್ಕೆ ಆಗಿರುತ್ತಾರೆ. ಮಕ್ಕಳ ಪ್ರತಿಭಾ ಕಾರಂಜಿ ಕಾರ್ಯಕ್ರಮದಲ್ಲಿ ಇವರು ಮಾರ್ಗದರ್ಶನ ಮಾಡಿದ ಜಾನಪದ ನೃತ್ಯ ಡೊಳ್ಳು ಕುಣಿತ ತಾಲೂಕು ಮಟ್ಟದಲ್ಲಿ ಎಲ್ಲರ ಗಮನ ಸೆಳೆದಿರುವುದು ವಿಶೇಷ. ಮಕ್ಕಳಿಗೆ ಎಲ್ಲ ರಂಗಗಳಲ್ಲಿ ಭಾಗವಹಿಸಲು ಪ್ರೋತ್ಸಾಹ ನೀಡುವುದು ಅಸಾಧಾರಣ ಕೆಲಸ. ಇಲ್ಲಿ ಶಿಕ್ಷಕರ ಸಂಪೂರ್ಣ ಮಾಹಿತಿ, ಮಾರ್ಗದರ್ಶನ ಹಾಗೂ ಶ್ರಮ ಕೂಡ ಅಷ್ಟೇ ಮುಖ್ಯವಾಗಿರುತ್ತದೆ.

ಬಾದಾಮಿ ತಾಲೂಕಿನ ಮಕ್ಕಳ ಸಾಹಿತ್ಯ ಪರಿಷತ್ನ ಕೋಶಾಧ್ಯಕ್ಷರು ಆಗಿ ಕಾರ್ಯ ನಿರ್ವಹಿಸುತ್ತಿರುವ BT ಹಳ್ಳಿ ವಿಜ್ಞಾನ ಶಿಕ್ಷಕರಿಗೆ ತರಬೇತಿ ನೀಡುತ್ತಾರೆ. ಇಲ್ಲಿ ವಿಷೇಶ ಎಂದರೆ ವೃತ್ತಿ ಬಗ್ಗೆ ಇವರಿಗೆ ಇರುವ ನಿಷ್ಠೆ,ಮಕ್ಕಳನ್ನು ಪಾಠಕ್ಕೆ ಮಾತ್ರ ಸೀಮಿತಗೊಳಿಸದೆ, ಎಲ್ಲ ರಂಗಗಳಲ್ಲಿ ಮಾರ್ಗದರ್ಶನ ಮಾಡಿ ಅವರನ್ನು ಪ್ರೋತ್ಸಾಹಿಸಿ, ಪಾಲ್ಗೊಳ್ಳುವಂತೆ ವಿಶೇಷ ಕಾಳಜಿ ವಹಿಸಿ ಅವರ ಸರ್ವತೋಮುಖ ಬೆಳವಣಿಗೆಗೆ ತಮ್ಮ ಸಹಾಯ ಸಹಕಾರ ಮಾಡುವ ಕ್ರಿಯಾಶೀಲ ಶಿಕ್ಷಕರು ವಿದ್ಯಾರ್ಥಿಗಳಿಗೆ ಸಿಗುವುದು ಸುದೈವವೇ ಅಲ್ಲವೆ.ಎಲ್ಲ ಶಿಕ್ಷಕರು BT ಹಳ್ಳಿ ಯಂತಹ ಶಿಕ್ಷಕರ ಹಾಗೆ ವಿದ್ಯಾರ್ಥಿಗಳಿಗೆ ಮಾರ್ಗದರ್ಶನ ನೀಡಿದ್ದೆ ಆದರೆ ನಮ್ಮ ದೇಶ ಪ್ರಗತಿಯ ಪಥದಲ್ಲಿ ಇನ್ನೊಂದು ಹೆಜ್ಜೆ ಮುಂದೆ ಇಡುವುದರಲ್ಲಿ ಎರಡು ಮಾತಿಲ್ಲ. ನಿಮ್ಮ ನಿಸ್ವಾರ್ಥ ಸೇವೆ, ಕಾರ್ಯಪ್ರವೃತ್ತಿ, ನಿಮ್ಮ ಮಾರ್ಗದರ್ಶನ ಹಾಗೂ ವಿದ್ಯಾರ್ಥಿಗಳ ಬಗ್ಗೆ ನಿಮಗಿರುವ ವಿಶೇಷ ಕಾಳಜಿಗೆ ಹೃತ್ಪೂರ್ವಕ ಧನ್ಯವಾದಗಳು...... ಶಿಕ್ಷಕರ ದಿನಾಚರಣೆಯ ಹಾರ್ಧಿಕ ಶುಭಾಶಯಗಳು



# ನೇತ್ರದಾನ ಮಾಡಿ, ಸಾರ್ಥಕತೆ ಹೊಂದಿ

## ಮಹಾವಿದ್ಯಾಲಯ ನಿರ್ದೇಶಕ ಡಾ.ಟಿ.ಗಂಗಾಧರ ಗೌಡ ಹೇಳಿಕೆ | 39ನೇ ರಾಷ್ಟ್ರೀಯ ನೇತ್ರದಾನ

■ ಹಂಪಿ ಟೈಮ್ಸ್ ಬಳ್ಳಾರಿ

ದೃಷ್ಠಿದೋಷವುಳ್ಳವರ ಬಾಳಿಗೆ ಬೆಳಕಾಗುವ ನೇತ್ರದಾನ ಮಾಡುವ ಪುಣ್ಯದ ಕಾರ್ಯದಲ್ಲಿ ಭಾಗಿಯಾಗಿ ಸಾರ್ಥಕತೆ ಹೊಂದಬೇಕು ಎಂದು ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯದ ನಿರ್ದೇಶಕ ಡಾ.ಟಿ.ಗಂಗಾಧರ ಗೌಡ ಹೇಳಿದರು.

ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಬಳ್ಳಾರಿ ವೈದ್ಯಕೀಯ ಮಹಾವಿದ್ಯಾಲಯ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ವಿಮ್ಸ್ ನೇತ್ರ ಭಂಡಾರ ಇವರ ಸಹಯೋಗದಲ್ಲಿ 39ನೇ ರಾಷ್ಟ್ರೀಯ ನೇತ್ರದಾನ ಪಾಕ್ಷಿಕ ಅಂಗವಾಗಿ ವೈದ್ಯ ಭವನದಲ್ಲಿ ಮಂಗಳವಾರ ಏರ್ಪಡಿಸಿದ್ದ ಜಾಗೃತಿ ಕಾರ್ಯಕ್ರಮದಅಧ್ಯಕ್ಷತೆವಹಿಸಿಮಾತನಾಡಿದರು.

ಮರಣದ ನಂತರ ಕಣ್ಣುಗಳನ್ನು ಮಣ್ಣಲ್ಲಿ ಮಣ್ಣು ಮಾಡದೇ ದೃಷ್ಠಿದೋಷ ಉಳ್ಳವರಿಗೆ ದಾನ ಮಾಡುವ ಅದ್ಭುತ ಕಾರ್ಯಕ್ಕೆ ಪ್ರತಿಯೊಬ್ಬರೂ ಕೈ ಜೋಡಿಸಬೇಕು ಎಂದರು.

ಆಕಸ್ಮಿಕ ಘಟನೆಗಳಲ್ಲಿ ಕಣ್ಣುಗಳನ್ನು ಕಳೆದುಕೊಂಡು ದೃಷ್ಟಿಹೀನರಾದಂತಹ ಜನತೆಗೆ ಇನ್ನೊಬ್ಬರ ಕಣ್ಣುಗಳನ್ನು ಕೊಡುವ ಮೂಲಕ ಅಂಧತ್ವ ನಿವಾರಣೆಗೆ ಅವಕಾಶವಿದ್ದು, ಬಿಮ್ಸ್ ನೇತ್ರ ಭಂಡಾರದಲ್ಲಿ ಕಣ್ಣುಗಳನ್ನು ದಾನವಾಗಿ ಪಡೆಯಲು ಹಾಗೂ ಅಗತ್ಯವುಳ್ಳವರಿಗೆ ಶಸ್ತ್ರಚಿಕಿತ್ಸೆ ಮೂಲಕ ಜೋಡಿಸುವ ಕಾರ್ಯವನ್ನು ಮಾಡಲಾಗುತ್ತಿದೆ ಎಂದು ಅವರು ಹೇಳಿದರು.

ವ್ಯಕ್ತಿ ಮೃತಪಟ್ಟ ಸಂದರ್ಭದಲ್ಲಿ ಕುಟುಂಬದ ಸದಸ್ಯರು ಬಿಮ್ಸ್‌ನ ನೇತ್ರ ಭಂಡಾರದ 9483414824 ಸಂಖ್ಯೆಗೆ ಕರೆ ಮಾಡಿ ತಿಳಿಸಿದಾಗ ವೈದ್ಯಕೀಯ ತಂಡವು ನೇತ್ರಗಳನ್ನು ಸುರಕ್ಷಿತವಾಗಿ ಪಡೆದುಕೊಳ್ಳುತ್ತಾರೆ. ಈ ಎಲ್ಲಾ ಕಾರ್ಯವು ವ್ಯಕ್ತಿ ಮೃತಪಟ್ಟ 6–8 ಗಂಟೆಯೊಳಗೆ ಮಾಡ ಬೇಕಾಗುತ್ತದೆ ಎಂದರು.



ಕಳೆದ ಜನವರಿಯಿಂದ ಇಲ್ಲಿಯವರೆಗೆ 50 ಜನರು ನೇತ್ರದಾನ ಮಾಡಿದ್ದಾರೆ. ಅದರಲ್ಲಿ 45ಕ್ಕೂ ಹೆಚ್ಚು ಜನರಿಗೆ ನೇತ್ರವನ್ನು ಅಳವಡಿಸಿ ಕಣ್ಣನ್ನು ಜೀವಂತವಿರುಸುವ ಮಹತ್ವದ ಕಾರ್ಯ ಮಾಡಲಾಗಿದೆ ಎಂದು ಹೇಳಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಯಲ್ಲಾ ರಮೇಶ್‌ಬಾಬು ಅವರು ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ, ಒಬ್ಬ ವ್ಯಕ್ತಿ ದಾನ ಮಾಡಿದ ನೇತ್ರಗಳು ಇಬ್ಬರು ಕಾರ್ನಿಯಾ ಅಂಧರಿಗೆ ದೃಷ್ಟಿ ಮರಳಿ ನೀಡುತ್ತವೆ, ನೇತ್ರದಾನ ಪ್ರತಿಯೊಂದು ಕುಟುಂಬದ ಸಂಪ್ರದಾಯವಾಗಬೇಕು. ಪ್ರತಿಯೊಬ್ಬ ಅಂಧ ವ್ಯಕ್ತಿ ಸಹ ಜಗತ್ತನ್ನು ನೋಡುವ ಅಪೂರ್ವ ಕ್ಷಣಗಳಿಗೆ ಕೈ ಜೋಡಿಸೋಣ ಎಂದು ಹೇಳಿದರು.

ಜಿಲ್ಲೆಯಲ್ಲಿ ಜಿಲ್ಲಾ ಅಂಧತ್ವ ನಿಯಂತ್ರಣ ಕಾರ್ಯಕ್ರಮದ ಮೂಲಕ ಜಿಲ್ಲಾಡಳಿತದ ಸಹಕಾರದೊಂದಿಗೆ ಎನ್‌ಎಮ್‌ಡಿಸಿ, ಸಿಎಸ್‌ಆರ್ ಅನುದಾನದಡಿ ಬಿಮ್ಸ್ ಉಚಿತ ಕಣ್ಣಿನಪೊರೆ ಶಸ್ತ್ರಚಿಕಿತ್ಸೆ ದೃಷ್ಟಿದೋಷ ಉಳ್ಳವರಿಗೆ ಕನ್ನಡಕ ವಿತರಣೆ ಕೈಗೊಳ್ಳಲಾಗುತ್ತಿದ್ದು, ಪ್ರಸ್ತುತ ವರ್ಷ 2741 ಕನ್ನಡಕಗಳನ್ನು ವಿತರಿಸಲಾಗಿದ್ದು, 6011 ಜನರಿಗೆ ಕಣ್ಣಿನ ಪೊರೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ ಎಂದರು.

ಈಗಾಗಲೇ ಬಳ್ಳಾರಿ ಜಿಲ್ಲೆಯು ಅಂಗಾಂಗ ದಾನದಲ್ಲಿ 4722 ಜನರು ಅಂಗಾಂಗ ದಾನ ನೋಂದಣಿ ಮಾಡುವ ಮೂಲಕ ರಾಷ್ಟ್ರಮಟ್ಟದಲ್ಲಿ ಮೊದಲ ಸ್ಥಾನದಲ್ಲಿದ್ದು, ಪ್ರತಿಯೊಬ್ಬರು ಮುಂದೆ ಬಂದು https://www.jeevasarthakathe.kar.go.in ನಲ್ಲಿ ನೋಂದಣಿ ಮಾಡಿಸಬೇಕು ಎಂದು ಕೋರಿದರು.

ಜಿಲ್ಲಾ ಅಂಧತ್ವ ನಿಯಂತ್ರಣ ಅಧಿಕಾರಿ ಡಾ.ವೀರೇಂದ್ರ ಕುಮಾರ್, ನೇತ್ರ ತಜ್ಞ ಡಾ. ಮಧನ್ ಜೋಶಿ, ವೈದ್ಯಕೀಯ ಅಧೀಕ್ಷಕ ಡಾ.ಚಿದಂಬರಂ, ನೇತ್ರ ವಿಭಾಗದ ಮುಖ್ಯಸ್ಥ ಡಾ.ಯೋಗೇಶ್, ನೇತ್ರ ಭಂಡಾರ ನಿರ್ದೇಶಕ ಡಾ.ಪರಸಪ್ಪ, ನರ್ಸಿಂಗ್ ಕಾಲೇಜು ಪ್ರಾಂಶುಪಾಲ ಸುಮ, ನೇತ್ರ ವಿಭಾಗದ ಡಾ.ರಮೇಶ್ ನಡಮನಿ ಸೇರಿದಂತೆ ವೈದ್ಯ ವಿದ್ಯಾರ್ಥಿಗಳು, ನರ್ಸಿಂಗ್ ಪ್ರಶಿಕ್ಷಣಾರ್ಥಿಗಳು ಉಪಸ್ಥಿತರಿದ್ದರು.

# ಮೆಟ್ರಿಕ್ ಪೂರ್ವ ವಿದ್ಯಾರ್ಥಿ ವೇತನಕ್ಕಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಪ್ರಸ್ತಕ ಸಾಲಿಗೆ 1 ರಿಂದ 8ನೇ ತರಗತಿ ಮೆಟ್ರಿಕ್ ಪೂರ್ವ ವ್ಯಾಸಂಗ ಮಾಡುತ್ತಿರುವ ಅಲ್ಪಸಂಖ್ಯಾತರ ವಿದ್ಯಾರ್ಥಿಗಳಿಂದ ಆನ್‌ಲೈನ್ ರಾಜ್ಯ ವಿದ್ಯಾರ್ಥಿವೇತನ ಪೋರ್ಟಲ್ (ಎಸ್‌ಎಸ್‌ಪಿ ಪೋರ್ಟಲ್) ಮೂಲಕ ಅರ್ಜಿ ಆಹ್ವಾನಿಸಲಾಗಿದೆ.

ಅರ್ಜಿ ಸಲ್ಲಿಸಲು ಅನ್‌ಲೈನ್ https://ssp,karnatka.go.in/ ವೆಬ್‌ಸೈಟ್ ಜಾಲತಾಣಕ್ಕೆ ಭೇಟಿ ನೀಡಬಹುದು. ಅರ್ಜಿ ಸಲ್ಲಿಸಲು ಅಕ್ಟೋಬರ್ 31 ಕೊನೆಯ ದಿನವಾಗಿದೆ.

**ಅರ್ಹತೆ:** ಅಲ್ಪಸಂಖ್ಯಾತರ ಸಮುದಾಯಕ್ಕೆ ಸೇರಿದ ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಸಿಖ್, ಭೌದ್ದ ಮತ್ತು ಪಾರ್ಸಿ ಜನಾಂಗಕ್ಕೆ ಸೇರಿದವರಾಗಿರಬೇಕು. ಎಲ್ಲಾ ಮೂಲಗಳಿಂದ ವಿದ್ಯಾರ್ಥಿಯ ಪಾಲಕರು, ಪೋಷಕರ ವಾರ್ಷಿಕ ಆದಾಯ ರೂ.1 ಲಕ್ಷ ಮೀರಿರಬಾರದು.

**ಸೂಚನೆ:** ಪ್ರಸಕ್ತ ಶೈಕ್ಷಣಿಕ ವರ್ಷದಲ್ಲಿ 1ನೇ ತರಗತಿಯಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಹೊಸದಾಗಿ ಅರ್ಜಿಯನ್ನು ಸಲ್ಲಿಸಬೇಕು. ಕಳೆದ ವರ್ಷದಲ್ಲಿ ವಿದ್ಯಾರ್ಥಿವೇತನ ಮಂಜೂರಾದ ವಿದ್ಯಾರ್ಥಿಗಳ ಅರ್ಜಿಗಳನ್ನು ಸ್ವಯಂ ನವೀಕರಣ ಎಂದು ಪರಿಗಣಿಸಲಾಗುತ್ತಿದ್ದು, ಮತ್ತೊಮ್ಮೆ ಅರ್ಜಿ ಸಲ್ಲಿಸುವ ಅವಶ್ಯಕತೆ ಇರುವುದಿಲ್ಲ.

ಹಿಂದಿನ ವರ್ಷ ವಿದ್ಯಾರ್ಥಿವೇತನಕ್ಕೆ ಅರ್ಜಿ ಸಲ್ಲಿಸಿ, ವಿದ್ಯಾರ್ಥಿವೇತನ ಮಂಜೂರಾಗದೇ ಇದ್ದಲ್ಲಿ ಅಂತಹ ವಿದ್ಯಾರ್ಥಿಗಳು ಹೊಸದಾಗಿ ಅರ್ಜಿ ಸಲ್ಲಿಸಬಹುದು. ವಿದ್ಯಾರ್ಥಿಗಳು ಬ್ಯಾಂಕ್ ಖಾತೆಗೆ ಆಧಾರ್ ಸೀಡಿಂಗ್ ಮತ್ತು ಎನ್‌ಸಿಪಿಐ ಮ್ಯಾಪಿಂಗ್ ಆಕ್ಟಿವ್ ಆಗಿರುವ ಬಗ್ಗೆ ಖಚಿತಪಡಿಸಿಕೊಳ್ಳಬೇಕು.

ವಿವರಗಳಿಗಾಗಿ ಜಿಲ್ಲಾ ಹಾಗೂ ತಾಲ್ಲೂಕು ಮಾಹಿತಿ ಕೇಂದ್ರಗಳ ದೂಸಂ: ಬಳ್ಳಾರಿ–08392–200215/224, 831032111, ಸಿರುಗುಪ್ಪ–9148889975, ಸಂಡೂರು–9036925966 ಸಂಪರ್ಕಿಸಬಹುದು.

ಹೆಚ್ಚಿನ ಮಾಹಿತಿಗಾಗಿ ಜೋಳದರಾಶಿ ದೊಡ್ಡನಗೌಡ ರಂಗಮಂದಿರ ಹತ್ತಿರದ ಮೌಲಾನ ಅಜಾದ ಭವನದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿಗಳ ಕಚೇರಿ ಅಥವಾ ಅಲ್ಪಸಂಖ್ಯಾತರ ಜಿಲ್ಲಾ ಹಾಗೂ ತಾಲ್ಲೂಕು ಮಾಹಿತಿ ಕೇಂದ್ರಗಳಿಗೆ ಸಂಪರ್ಕಿಸಿ.

# ಉಚಿತ ಕೌಶಲ್ಯಾಧಾರಿತ ತರಬೇತಿಗೆ ಆಹ್ವಾನ

■ ಹಂಪಿ ಟೈಮ್ಸ್ ಕೊಪ್ಪಳ

ಉತ್ತರ ಕನ್ನಡ ಜಿಲ್ಲೆಯ ಹಳಿಯಾಳದ ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆಯಿಂದ ಉಚಿತ ಕೌಶಲ್ಯಾಧಾರಿತ ತರಬೇತಿಗಾಗಿ ಅರ್ಜಿ ಆಹ್ವಾನಿಸಲಾಗಿದೆ.

18 ರಿಂದ 45 ವಯೋಮಾನದ ಗ್ರಾಮೀಣ ಭಾಗದ ನಿರುದ್ಯೋಗಿ ಯುವಕರಿಗಾಗಿ ಸೆಪ್ಟೆಂಬರ್ ತಿಂಗಳಿನಲ್ಲಿ ಟ್ರಾವೆಲ್ ಮತ್ತು ಟೂರಿಸ್ಟ್ ಗೈಡ್ ಮತ್ತು ನವೆಂಬರ್ ತಿಂಗಳಿನಲ್ಲಿ ಮೊಬೈಲ್ ಫೋನ್ ರಿಪೇರಿ ಮತ್ತು ಸರ್ವಿಸಿಂಗ್ ಹಾಗೂ ಜೆಸಿಬಿ ಚಾಲನೆತರಬೇತಿಗಳನ್ನುನೀಡಲಾಗುತ್ತಿದ್ದು, ತರಬೇತಿ ಅವಧಿಯಲ್ಲಿ ಊಟ ಹಾಗೂ ವಸತಿಯು ಉಚಿತವಾಗಿರುತ್ತದೆ.

ಅಭ್ಯರ್ಥಿಗಳು ತಮ್ಮ ಹೆಸರು, ವಿಳಾಸಗಳನ್ನು ನೋಂದಾಯಿಸಲು ಸೆಪ್ಟೆಂಬರ್ 15 ಕೊನೆಯ ದಿನವಾಗಿದ್ದು, ಮೊದಲು ಬಂದವರಿಗೆ ಹಾಗೂ ಗ್ರಾಮೀಣ ಭಾಗದವರಿಗೆ ಮೊದಲ ಆದ್ಯತೆ ನೀಡಲಾಗುವುದು. ತರಬೇತಿಯಲ್ಲಿ ಕೌಶಲ್ಯ, ಸಾಫ್ಟ್ ಸ್ಕಿಲ್ಸ್, ಯೋಗ ತರಬೇತಿ ಹಾಗೂ ಬ್ಯಾಂಕಿಂಗ್ ನಿಂದ ಸಾಲ ಪಡೆದು ಸ್ವ–ಉದ್ಯೋಗ ಪ್ರಾರಂಭಿಸಲು ಬೇಕಾಗುವ ಜ್ಞಾನ, ಸರಕಾರಿ ಯೋಜನೆಗಳು ಮತ್ತು ಯೋಜನಾ ವರದಿ ತಯಾರಿಕೆ ಇನ್ನೇತರ ಮಾಹಿತಿಯನ್ನು ಉಚಿತವಾಗಿ ನೀಡಲಾಗುವುದು.

ತರಬೇತಿಯಲ್ಲಿ ಭಾಗವಹಿಸಲು ಇಚ್ಛಿಸುವ ಆಸಕ್ತರು ನಿರ್ದೇಶಕರು, ಕೆನರಾ ಬ್ಯಾಂಕ್ ದೇಶಪಾಂಡೆ ಆರ್‌ಸೆಟ್ ಸಂಸ್ಥೆ, ಹಳಿಯಾಳ, ಉತ್ತರ ಕನ್ನಡ ಜಿಲ್ಲೆ ಈ ವಿಳಾಸಕ್ಕೆ, ದೂ.ಸಂ : 8217236973, 9483485489, 9482188780, ಗೆ ಸಂಪರ್ಕಿಸಿ.

# ಐಎಎಸ್, ಕೆಎಎಸ್ ಪರೀಕ್ಷೆಗೆ ತರಬೇತಿಗಾಗಿ ಅರ್ಜಿ ಆಹ್ವಾನ

■ ಹಂಪಿ ಟೈಮ್ಸ್ ಬಳ್ಳಾರಿ

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆ ವತಿಯಿಂದ ಪ್ರಸ್ತಕ ಸಾಲಿನಲ್ಲಿ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ ಪಡೆಯಲು ಅಲ್ಪಸಂಖ್ಯಾತರ ಸಮುದಾಯದವರಿಂದ ಅರ್ಜಿ ಆಹ್ವಾನಿಸಲಾಗಿದೆ.

ಅಲ್ಪಸಂಖ್ಯಾತರ ನಿರ್ದೇಶನಾಲಯದ ವತಿಯಿಂದ ಕರ್ನಾಟಕ ಹಜ್ ಭವನದಲ್ಲಿ ವಸತಿ ಸಹಿತ ಪರೀಕ್ಷಾ ಪೂರ್ವ ತರಬೇತಿಯನ್ನು ನೀಡಲಾಗುತ್ತದೆ. ತರಬೇತಿಗೆ ಅರ್ಹ ಅಲ್ಪಸಂಖ್ಯಾತರ ಸಮುದಾಯದ (ಮುಸ್ಲಿಂ, ಕ್ರಿಶ್ಚಿಯನ್, ಜೈನ್, ಬೌದ್ಧ, ಸಿಖ್ಖ್, ಪಾರ್ಸಿ) ಅಭ್ಯರ್ಥಿಗಳಿಂದ ಸೇವಾಸಿಂಧು ವೆಬ್ ಪೋರ್ಟಲ್ https://sevasindu.karnataka.gov.in ನಲ್ಲಿ ಅರ್ಜಿ ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಸೆ.10 ಕೊನೆಯ ದಿನವಾಗಿರುತ್ತದೆ. ಹೆಚ್ಚಿನ ಮಾಹಿತಿಗಾಗಿ ಅಲ್ಪಸಂಖ್ಯಾತರ ನಿರ್ದೇಶನಾಲಯದ ವೆಬ್‌ಸೈಟ್ www.dom.kernataka.gov.in ರಲ್ಲಿ "2024–25 ಸಾಲಿನ ಐಎಎಸ್, ಕೆಎಎಸ್ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಪರೀಕ್ಷಾ ಪೂರ್ವ ತರಬೇತಿ" ಇಲ್ಲಿ ಕ್ಲಿಕ್ ಮಾಡುವುದರ ಮೂಲಕ ಅಥವಾ ಸಹಾಯವಾಣಿ ಸಂಖ್ಯೆ 8277799990 ಗೆ ಸಂಪರ್ಕಿಸಿ.

ಹಂಪಿ ಟೈಮ್ಸ್
HAMPI TIMES

ಮೈಮೇಲೆ ಹರಿದ ಬಟ್ಟೆ ಇದ್ದರೂ ಚಿಂತೆಯಿಲ್ಲ. ಕೈಯಲ್ಲೊಂದು ಕನ್ನಡ ಪತ್ರಿಕೆ ಇರಲಿ.
ಡಿ..ವಿ.ಜಿ.

## ನಿತ್ಯ ಪಂಚಾಂಗ

ಮಾಸ: ಭಾದ್ರಪದ । ಸಂವತ್ಸರ: ಕ್ರೋಧಿ

**04–09–2024 – ಬುಧವಾರ**

| | |
|---|---|
| ತಿಥಿ | : ಪ್ರಥಮ |
| ಪಕ್ಷ | : ಶುಕ್ಲ |
| ನಕ್ಷತ್ರ | : ಉತ್ತರ ಫಾಲ್ಗುಣ |
| ಯೋಗ | : ಸಾಧ್ಯ |
| ಕರಣ | : ಭವ |
| ಸೂರ್ಯೋದಯ | : 06:11:15 |
| ಸೂರ್ಯಾಸ್ತ | : 18:40:01 |
| ರಾಹು ಕಾಲ | : 12:26–13:59 |
| ಯಮಘಂಡ ಕಾಲ | : 07:45–09:18 |
| ಗುಳಿಕ ಕಾಲ | : 10:52–12:26 |

## ತುಂಗಭದ್ರಾ ನೀರಿನ ಮಟ್ಟ



ಮಂಗಳವಾರ : 03–09–2024

| | |
|---|---|
| ಗರಿಷ್ಠ ಮಟ್ಟ | 1633 ಅಡಿ |
| ಇಂದಿನ ಮಟ್ಟ | 1631.38 ಅಡಿ |
| ಒಳ ಹರಿವು | 29907 ಕ್ಯುಸೆಕ್ |
| ಹೊರ ಹರಿವು | 15264 ಕ್ಯುಸೆಕ್ |
| ಇಂದಿನ ಸಾಮರ್ಥ್ಯ | 99.351 ಟಿಎಂಸಿ |
| ಗರಿಷ್ಠ ಸಾಮರ್ಥ್ಯ | 105.788 ಟಿಎಂಸಿ |
| **ಕಳೆದ ವರ್ಷ ಇದೇ ದಿನ** | |
| ಇಂದಿನ ಮಟ್ಟ | 1624.39 ಅಡಿ |
| ಒಳ ಹರಿವು | 542 ಕ್ಯುಸೆಕ್ |
| ಹೊರ ಹರಿವು | 10158 ಕ್ಯುಸೆಕ್ |
| ಸಾಮರ್ಥ್ಯ | 74.518 ಟಿಎಂಸಿ |

# ರೈತರ ಜಮೀನು ಬೆಳೆಗಳ ನಿಖರ ಮಾಹಿತಿ ನಮೂದಿಸಿ

## ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ । ವಿಡೀಯೋ ಸಂವಾದ ಸಭೆ



■ ಹಂಪಿ ಟೈಮ್ಸ್ ಬಳ್ಳಾರಿ

ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆ ಕಾರ್ಯ ಚಾಲ್ತಿಯಲ್ಲಿದ್ದು, ಖಾಸಗಿ ನಿವಾಸಿಗಳು ಮತ್ತು ಮೇಲ್ವಿಚಾರಕರು ರೈತರ ಜಮೀನು ಬೆಳೆಗಳ ಮಾಹಿತಿಯನ್ನು ನಿಖರವಾಗಿ ನಮೂದಿಸಬೇಕು. ಇದಕ್ಕೆ ಆಯಾ ತಾಲ್ಲೂಕು ತಹಶೀಲ್ದಾರರು ನಿಗಾವಹಿಸಬೇಕು ಎಂದು ಜಿಲ್ಲಾಧಿಕಾರಿ ಪ್ರಶಾಂತ್ ಕುಮಾರ್ ಮಿಶ್ರಾ ಅವರು ಹೇಳಿದರು.

ಮಂಗಳವಾರ ಬೆಳೆ ಸಮೀಕ್ಷೆಯ ಕುರಿತು ಎಲ್ಲಾ ತಹಶೀಲ್ದಾರರೊಂದಿಗೆ ವಿಡೀಯೋ ಸಂವಾದ ಸಭೆ ನಡೆಸಿ ಅವರು ಮಾತನಾಡಿದರು.

ಬೆಳೆ ಸಮೀಕ್ಷೆ ಪ್ರಕ್ರಿಯೆಯನ್ನು ಮೊಬೈಲ್ ಆಪ್ ಬಳಸಿ ಮಾಡಲಾಗುತ್ತಿದ್ದು, ಗ್ರಾಮ ನಕಾಶೆ ಅಳವಡಿಸಿರುವುದರಿಂದ ಆಯಾ ತಾಕಿನ ಗಡಿ ರೇಖೆಯೊಳಗೆ ಹೋಗಿ ಜಿಪಿಎಸ್ ನಿಖರತೆ ಪಡೆದು ಛಾಯಾಚಿತ್ರದೊಂದಿಗೆ ಬೆಳೆಯ ವಿವರಗಳನ್ನು ದಾಖಲು ಮಾಡಬೇಕು. ಆಯಾ ತಾಕಿನಲ್ಲಿ ಎಲ್ಲಾ ಬೆಳೆಗಳ ವಿವರಗಳನ್ನು ಕಡ್ಡಾಯವಾಗಿ ದಾಖಲು ಮಾಡಬೇಕು ಎಂದು ಅವರು ತಿಳಿಸಿದರು.

ತಾಲ್ಲೂಕು ಮಟ್ಟದ ಸಮಿತಿಯ ಮೂಲಕ ಬೆಳೆ ಸಮೀಕ್ಷೆ ಚಟುವಟಿಕೆಯನ್ನು ನಡೆಸಲು ಗ್ರಾಮವಾರು ಖಾಸಗಿ ನಿವಾಸಿಗಳು ಮತ್ತು ಮೇಲ್ವಿಚಾರಕರನ್ನು ನೇಮಿಸಬೇಕು. ಅವರಿಗೆ ಅಗತ್ಯ ತರಬೇತಿ ನೀಡಬೇಕು ಎಂದು ತಹಶೀಲ್ದಾರರಿಗೆ ನಿರ್ದೇಶನ ನೀಡಿದರು.

ಪ್ರಸ್ತಕ ವರ್ಷದಲ್ಲಿ ಅತೀ ಹೆಚ್ಚು ರೈತರು ಬೆಳೆ ವಿಮೆಗೆ ನೋಂದಾಯಿಸಿಕೊಂಡಿದ್ದು, ಎಲ್ಲಾ ವಿಧದ ಬೆಳೆಗಳು ಮತ್ತು ಮಿಶ್ರ ಬೆಳೆಗಳ ಮಾಹಿತಿಯನ್ನು ನಮೂದಿಸಬೇಕು. ಇದಕ್ಕೆ ರೈತರ ಸಹಕಾರವು ಪಡೆಯಬೇಕು ಎಂದು ತಿಳಿಸಿದರು.

ಬೆಳೆ ಸಮೀಕ್ಷೆಯ ಕಾರ್ಯವು ಸೆ.31 ರ ವರೆಗೆ ನಡೆಯಲಿದ್ದು, ಗ್ರಾಮವಾರು ಪಟ್ಟಿಮಾಡಿಕೊಂಡು ಗುರಿ ನಿಗದಿಪಡಿಸಿ ಪೂರ್ಣಗೊಳಿಸಬೇಕು. ಆಯಾ ತಹಶೀಲ್ದಾರರು ವಾರಕ್ಕೊಮ್ಮೆ ವರದಿ ಸಲ್ಲಿಸಬೇಕು ಎಂದು ಜಿಲ್ಲಾಧಿಕಾರಿಗಳು ಹೇಳಿದರು.

ಜಂಟಿ ಕೃಷಿ ನಿರ್ದೇಶಕ ಡಾ.ಸೋಮಸುಂದರ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಮುಂಗಾರು ಹಂಗಾಮಿನ ಬೆಳೆ ಸಮೀಕ್ಷೆಗೆ 3.50 ಲಕ್ಷ ತಾಕುಗಳಲ್ಲಿ ಬೆಳೆ ಸಮೀಕ್ಷೆ ಕೈಗೊಳ್ಳಲು ಗುರಿ ನಿಗಧಿಯಾಗಿದೆ. ಬಳ್ಳಾರಿ ತಾಲ್ಲೂಕಿನಲ್ಲಿ 1,21,488, ಕಂಪ್ಲಿ ತಾಲ್ಲೂಕಿನಲ್ಲಿ 42,507, ಕುರುಗೋಡಿನಲ್ಲಿ 54,093, ಸಂಡೂರು ತಾಲ್ಲೂಕಿನಲ್ಲಿ 50,134 ಹಾಗೂ ಸಿರುಗುಪ್ಪ ತಾಲ್ಲೂಕಿನಲ್ಲಿ 1,33,054 ತಾಕುಗಳಲ್ಲಿ ಬೆಳೆ ಸಮೀಕ್ಷೆ ಕೈಗೊಳ್ಳಬೇಕಾಗಿದ್ದು, ಪ್ರಸ್ತುತ 86,177 ತಾಕುಗಳಲ್ಲಿ ಬೆಳೆ ಸಮೀಕ್ಷೆ ಪೂರ್ಣಗೊಂಡಿದ್ದು, ಬೆಳೆ ಸಮೀಕ್ಷೆ ಪ್ರಗತಿಯಲ್ಲಿದೆ ಎಂದು ಅವರು ಸಭೆಗೆ ತಿಳಿಸಿದರು.

ಬೆಳೆ ಸಮೀಕ್ಷೆ ಮೂಲಕ ಸಂಗ್ರಹಿಸಿದ ಮಾಹಿತಿಯನ್ನು ಬೆಳೆ ನಷ್ಟ ಪರಿಹಾರ, ಕನಿಷ್ಟ ಬೆಂಬಲ ಬೆಲೆ ಯೋಜನೆ, ಪಹಣಿಯಲ್ಲಿ ಬೆಳೆ ನಮೂದು ಮಾಡಲು, ಬೆಳೆ ವಿಮಾ ಯೋಜನೆ, ಬೆಳೆ ಸಾಲ ಇತ್ಯಾದಿ ಸೌಲಭ್ಯ ಒದಗಿಸಲು ಬಳಸಲಾಗುವುದು ಎಂದರು.

ರೈತರು ತಮ್ಮ ಬೆಳೆಗಳ ಮಾಹಿತಿ ನಮೂದು ಮಾಡಬಹುದು. ಒಂದು ವೇಳೆ ಸ್ವತಃ ರೈತರೆ ತಮ್ಮ ಬೆಳೆ ದಾಖಲು ಮಾಡಲು ಗೊಂದಲವಿದ್ದಲ್ಲಿ ಗ್ರಾಮಕ್ಕೆ ನಿಯೋಜಿಸಿರುವ ಖಾಸಗಿ ನಿವಾಸಿ (ಪಿ.ಆರ್.)ಗಳನ್ನು ಸಂಪರ್ಕಿಸಿ ತಾವು ಬೆಳೆದ ಬೆಳೆಗಳ ಮಾಹಿತಿಯನ್ನು ಪಿ.ಆರ್. ಆಪ್ ಮೂಲಕ ದಾಖಲಿಸಬಹುದು ಎಂದರು.

ಈ ಸಂದರ್ಭದಲ್ಲಿ ಅಪರ ಜಿಲ್ಲಾಧಿಕಾರಿ ಮಹಮ್ಮದ್ ಝುಬೇರ್, ಎಎಸ್ಪಿ ನವೀನ್ ಕುಮಾರ್ ಸೇರಿದಂತೆ ಜಿಲ್ಲಾ ಮಟ್ಟದ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

# ಶೇ.60ರಷ್ಟು ಕನ್ನಡ ನಾಮಫಲಕ ಕಡ್ಡಾಯ

■ ಹಂಪಿ ಟೈಮ್ಸ್ ಬಳ್ಳಾರಿ

ಕಂಪ್ಲಿ ಪುರಸಭೆ ವ್ಯಾಪ್ತಿಯಲ್ಲಿನ ಎಲ್ಲಾ ಸರ್ಕಾರಿ ಕಚೇರಿ, ಕಟ್ಟಡಗಳು, ಸಾರ್ವಜನಿಕ ಹಾಗೂ ಖಾಸಗಿ ಕಟ್ಟಡಗಳು, ವಾಣಿಜ್ಯ ಕಟ್ಟಡಗಳು ಹಾಗೂ ಅಂಗಡಿ ಮುಂಗಟ್ಟುಗಳ ನಾಮಫಲಕಗಳನ್ನು ಕಡ್ಡಾಯವಾಗಿ ಕನ್ನಡ ಭಾಷೆಯಲ್ಲಿಯೇ ಹಾಕಿಸಬೇಕು ಎಂದು ಕಂಪ್ಲಿ ಪುರಸಭೆ ಮುಖ್ಯಾಧಿಕಾರಿ ದುರುಗಣ್ಣ ಅವರು ತಿಳಿಸಿದ್ದಾರೆ.

ನಾಮಫಲಕಗಳ ಮೇಲ್ಭಾಗದಲ್ಲಿ ಕನ್ನಡ ಭಾಷೆಯು ಶೇ.60ರಷ್ಟು ಮತ್ತು ಶೇ.40 ರಷ್ಟು ಆಂಗ್ಲಭಾಷೆಯಲ್ಲಿ ಪ್ರದರ್ಶಿಸಬೇಕು. ಇದನ್ನು ಪಾಲಿಸದಿದ್ದಲ್ಲಿ ಕನ್ನಡ ಭಾಷಾ ಸಮಗ್ರ ಅಭಿವೃದ್ಧಿ ಅಧಿನಿಯಮ 2022 ಹಾಗೂ (ತಿದ್ದುಪಡಿ) ಅಧಿನಿಯಮ 2024 ಪ್ರಕಾರ ನಿಯಮಾನುಸಾರ ಕ್ರಮ ಜರುಗಿಸಲಾಗುವುದು ಎಂದು ತಿಳಿಸಿದ್ದಾರೆ.

# ಟಿಬಿಡ್ಯಾಂ ಮತ್ತೆ ಭರ್ತಿ

## ಇಂದು 50 ಸಾವಿರ ಕ್ಯುಸೆಕ್‌ವರೆಗೆ ನದಿಗೆ ನೀರು ನದಿಪಾತ್ರದ ಜನರಿಗೆ ಎಚ್ಚರಿಕೆ : ಟಿಬಿ ಮಂಡಳಿ



■ ಹಂಪಿ ಟೈಮ್ಸ್ ಹೊಸಪೇಟೆ

ತುಂಗಭದ್ರಾ ಜಲಾಶಯ ಸಿಎಂ ಸಿದ್ದರಾಮಯ್ಯನವರು ನುಡಿದ ಭವಿಷ್ಯದಂತೆ ಮತ್ತೆ ಜಲಾಶಯ ಭರ್ತಿಯಾಗಿದೆ. ಜಲಾಶಯದ ಕೆಲಭಾಗದ ಜನರು ನದಿಪಾತ್ರದಿಂದ ದೂರ ಉಳಿಯಬೇಕು. ಸೆ.4 ರಿಂದ 5 ಸಾವಿರದಿಂದ 50 ಸಾವಿರ ಕ್ಯುಸೆಕ್‌ವರೆಗೆ ಒಳಹರಿವಿನ ಪ್ರಮಾಣಕ್ಕೆ ತಕ್ಕಂತೆ ನೀರು ನದಿಗೆ ಬಿಡಲಾಗುವುದು. ಜನರು ಮುನ್ನೆಚ್ಚರಿಕೆ ಕ್ರಮವಹಿಸಬೇಕು ಎಂದು ಟಿ.ಬಿ.ಡ್ಯಾಂ ಮಂಡಳಿ ತಿಳಿಸಿದೆ.

# ಅರ್ಹ ಅಲ್ಪಸಂಖ್ಯಾತ ಸಮುದಾಯದ ಮಾಹಿತಿ ಯೋಜನೆಗಳನ್ನು ಒದಗಿಸಿ

## ಡಿಸಿ ಪ್ರಶಾಂತ್ ಕುಮಾರ್ ಮಿಶ್ರಾ ಸೂಚನೆ । ಗ್ರಾಮ ಪಂಚಾಯತ್‌ವಾರು ಸಭೆ

■ ಹಂಪಿ ಟೈಮ್ಸ್ ಬಳ್ಳಾರಿ

ವಿವಿಧ ಇಲಾಖೆಗಳು ನೀಡುವ ಫಲಾನುಭವಿ ಆಧಾರಿತ ಮತ್ತು ಸಮುದಾಯ ಆಧಾರಿತ ಯೋಜನೆಗಳನ್ನು ಅರ್ಹ ಅಲ್ಪಸಂಖ್ಯಾತರಿಗೆ ತಲುಪಿಸಲು ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಅಧಿಕಾರಿಗಳು ಗ್ರಾಪಂ ವಾರು ಸಭೆ ಜರುಗಿಸಿ, ಯೋಜನೆಗಳ ಮಾಹಿತಿ ನೀಡಬೇಕು ಎಂದು ಡಿಸಿ ಪ್ರಶಾಂತ್‌ಕುಮಾರ್ ಮಿಶ್ರಾ ಅಧಿಕಾರಿಗಳಿಗೆ ಸೂಚಿಸಿದರು.

ಮಂಗಳವಾರದಂದು ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೋ ಸಭಾಂಗಣದಲ್ಲಿ ಏರ್ಪಡಿಸಿದ್ದ ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಪ್ರಧಾನ ಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮಗಳ ಪ್ರಗತಿ ಪರಿಶೀಲನಾ ಸಭೆಯ ಅಧ್ಯಕ್ಷತೆ ವಹಿಸಿ ಮಾತ ನಾಡಿದರು.

ಯೋಜನೆಗಳ ತಲುಪಿಸುವ ವಿವಿಧ ಇಲಾಖೆ ಅಧಿಕಾರಿಗಳು ಅರ್ಹ ಫಲಾನುಭವಿಗಳನ್ನು ಗುರುತಿಸುವ ಕಾರ್ಯ ಮಾಡಬೇಕು. ಅರ್ಹರಿಗೆ ಸೌಲಭ್ಯ ನೀಡಬೇಕು ಎಂದರು.

ಫಲಾನುಭವಿ ಆಧಾರಿತ ಮತ್ತು ಸಮುದಾಯ ಆಧಾರಿತ ಯೋಜನೆಗಳ ಪ್ರಯೋಜನ ಪಡೆದಿರುವವರ ವಿವರಗಳನ್ನು



ದಾಖಲಿಸಿ, ನಿರ್ವಹಿಸಬೇಕು. ಹೊಸ ಫಲಾನುಭವಿಗಳಿಗೆ ಅವಕಾಶ ನೀಡಬೇಕು ಎಂದು ಹೇಳಿದರು.

ವಿವಿಧ ಇಲಾಖೆಗಳಲ್ಲಿನ ಅಲ್ಪಸಂಖ್ಯಾತರಿಗೆ ಸೀಗಬೇಕಾದ ಸೌಲಭ್ಯ ಮತ್ತು ಯೋಜನೆಗಳಲ್ಲಿ ಪ್ರಗತಿ ಸಾಧಿಸಬೇಕು. ಪ್ರಧಾನಮಂತ್ರಿಗಳ ಹೊಸ 15 ಅಂಶಗಳ ಕಾರ್ಯಕ್ರಮದಡಿ ಬರುವ ಅಲ್ಪ ಸಂಖ್ಯಾತ ಸಮುದಾಯಗಳ ಪ್ರದೇಶಗಳಲ್ಲಿ ವಿವಿಧ ಇಲಾಖೆಗಳ ಸಹಯೋಗ ಮತ್ತು ಸ್ಥಳೀಯ ಸಂಸ್ಥೆಗಳ ಸಹಕಾರದಲ್ಲಿ ಗ್ರಾಮಗಳ ಮಟ್ಟದಲ್ಲಿ ಮಾಹಿತಿ ಸಭೆ ಆಯೋಜಿಸಬೇಕೆಂದು ಹೇಳಿದರು.

2024–25 ನೇ ಸಾಲಿಗೆ ನಿಗಧಿತ ಗುರಿಗೆ ಎಲ್ಲ ಇಲಾಖೆಗಳು ಕ್ರಿಯಾಯೋಜನೆ ರೂಪಿಸಿ, ಸಮರ್ಪಕವಾಗಿ ಅನುಷ್ಠಾನಗೊಳಿಸಬೇಕು ಎಂದರು.

ಅಲ್ಪಸಂಖ್ಯಾತರಿಗೆ ಸವಲತ್ತುಗಳನ್ನು ತಲುಪಿಸುವ ಕಡೆ ಅಧಿಕಾರಿಗಳು ಗಮನಹರಿಸಬೇಕು. ಪ್ರತಿಯೊಬ್ಬ ನಾಗರಿಕರಿಗೂ ಎಲ್ಲ ಯೋಜನೆಗಳು ಮಾಹಿತಿ ದೊರೆಯುವಂತೆ ಅಧಿಕಾರಿಗಳು ಕಾರ್ಯ ನಿರ್ವಹಿಸಬೇಕು ಎಂದು ತಿಳಿಸಿದರು.

ಇದೇ ಸಂದರ್ಭದಲ್ಲಿ ರಾಜ್ಯ ಸರ್ಕಾರದ ಐದು ಗ್ಯಾರಂಟಿ ಯೋಜನೆಗಳು ಅಲ್ಪ ಸಂಖ್ಯಾತರ ಸಮುದಾಯದವರಿಗೆ ಸಮರ್ಪಕವಾಗಿ ತಲುಪುತ್ತಿದೆಯೇ ಎಂದು ಅವರು ಸಂಬಂಧಿಸಿದ ಇಲಾಖೆಗಳ ಅಧಿಕಾರಿಗಳಿಗೆ ವಿಚಾರಿಸಿದರು.

ಅಲ್ಪಸಂಖ್ಯಾತರ ಕಲ್ಯಾಣ ಇಲಾಖೆಯ ಜಿಲ್ಲಾ ಅಧಿಕಾರಿ ವಿಠೋಬಾ ಹೊನಕಾಂಡೆ ಅವರು ಸ್ವಾಗತಿಸಿ, ಸಭೆ ನಿರ್ವಹಿಸಿದರು.

ಸಭೆಯಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆಯ ಉಪನಿರ್ದೇಶಕ ವಿಜಯ್‌ಕುಮಾರ್ ಸೇರಿದಂತೆ ವಿವಿಧ ಇಲಾಖೆಗಳ ಜಿಲ್ಲಾಮಟ್ಟದ ಅಧಿಕಾರಿಗಳು ಸಭೆಯಲ್ಲಿ ಭಾಗವಹಿಸಿ, ಇಲಾಖಾವಾರು ಪ್ರಗತಿ ವರದಿ ಸಲ್ಲಿಸಿದರು.

# ಏಡ್ಸ್‌ನಿಂದ ಸಾವಾಗದಂತೆ ಕ್ರಮವಹಿಸಿ : ನಲಿನ್ ಅತುಲ್

■ ಹಂಪಿ ಟೈಮ್ಸ್ ಕೊಪ್ಪಳ

ಹೊಸ ಹೆಚ್.ಐ.ವಿ. ಸೋಂಕನ್ನು, ಕಳಂಕ ಮತ್ತು ತಾರತಮ್ಯವನ್ನು ಮತ್ತು ಏಡ್ಸ್ ಸಾವನ್ನು ಸೊನ್ನೆಗೆ ತರಲು ಅಗತ್ಯ ಕ್ರಮ ವಹಿಸುವಂತೆ ಜಿಲ್ಲಾಧಿಕಾರಿಗಳಾದ ನಲಿನ್ ಅತುಲ್ ಅವರು ಸಂಬಂಧಿಸಿದ ಅಧಿಕಾರಿಗಳಿಗೆ ಸೂಚನೆ ನೀಡಿದರು.

ಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಇತ್ತೀಚೆಗೆ ಏರ್ಪಡಿಸಲಾಗಿದ್ದ ಜಿಲ್ಲಾ ಏಡ್ಸ್ ನಿಯಂತ್ರಣ ಸಮನ್ವಯ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದರು.

ಹೆಚ್.ಐ.ವಿ ಹರಡುವಿಕೆಯನ್ನು ನಿಯಂತ್ರಣಕ್ಕಾಗಿ ಕಾರ್ಯಕ್ರಮ ರೂಪಿಸಿ ಅಗತ್ಯ ಕ್ರಮ ಕ್ರಮಕ್ಕೆ ಸಂಬಂಧಪಟ್ಟ ಜಿಲ್ಲಾ ಮಟ್ಟದ ಅಧಿಕಾರಿಗಳನ್ನು ತೊಡಗಿಸಿಕೊಳ್ಳಬೇಕು. ಹೆಚ್.ಐ.ವಿ ಬಾಧಿತರಿಗೆ ಆರೈಕೆ, ಬೆಂಬಲ ನೀಡುವುದು ಮತ್ತು ಸವಲತ್ತುಗಳನ್ನು ಒದಗಿಸುವುದರಲ್ಲಿ ಕೈಜೋಡಿಸಬೇಕು. ಹೆಚ್.ಐ.ವಿ ಬಗೆಗಿರುವ ಕಳಂಕ ಮತ್ತು ತಾರತಮ್ಯವನ್ನು ಹೋಗಲಾಡಿಸಲು ಇಲಾಖೆಯ ಅನುದಿನದ ಕಾರ್ಯಕ್ರಮಗಳಲ್ಲಿ ಅರಿವು ಮಾಡಿಸಬೇಕು. ಕಾರ್ಯವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ವಾಸವಿರುವ ಹೆಚ್.ಐ.ವಿ ಬಾದಿತರು ಹಾಗೂ ಅವರ ಕುಟುಂಬದವರಿಗೆ ಸಹಕಾರವನ್ನು ನೀಡಿ. ಹೆಚ್.ಐ.ವಿ ಗೆ ಸಂಬಂದಿಸಿದಂತೆ ಜಿಲೆಯಲ್ಲಿ ಉಚಿತವಾಗಿ ಸಿಗುವ ಸೇವಾ ಸೌಲಭ್ಯಗಳು, ಆಪ್ತ ಸಮಾಲೋಚನೆ ಮತ್ತು ಪರೀಕ್ಷೆ, ಔಷದೋಪಚಾರ, ಡಾಟ್ಸ್ ಟಿ.ಬಿ ಚಿಕಿತ್ಸೆ, ಸಿ.ಪಿ.ಟಿ ಔಷದೋಪಚಾರ ಹಾಗೂ ಇತರ ಕಾರ್ಯಕ್ರಮಗಳನ್ನು ಸಮರ್ಪಕವಾಗಿ ಹಮ್ಮಿಕೊಳ್ಳುವಂತೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಜಿಲ್ಲಾ ಏಡ್ಸ್ ನಿಯಂತ್ರಣಾಧಿಕಾರಿ ಗಳಾದ ಡಾ ಶಶೀಧರ ಎ ಅವರು ಮಾತನಾಡಿದರು. 2023–24 ರಲ್ಲಿ ಸಾಮಾನ್ಯ ಜನರಲ್ಲಿ 84015 ಅರ್ಥಿಗಳಿಗೆ ಪರೀಕ್ಷೆ ಮಾಡಲಾಗಿದ್ದು, ಇದರಲ್ಲಿ 0.38% ಪಾಸಿಟಿವಿಟಿ ಕಂಡುಬಂದಿದೆ. ಗರ್ಭಿಣಿ ಸ್ತ್ರೀಯರಲ್ಲಿ 36293 ಅರ್ಥಿಗಳಿಗೆ ಪರೀಕ್ಷೆ ಮಾಡಲಾಗಿದ್ದು, ಇದರಲ್ಲಿ 0.05% ಪಾಸಿಟಿವಿಟಿ ಕಂಡುಬಂದಿರುತ್ತದೆ. ಸೋಂಕು ಕಂಡುಬಂದ ಪ್ರತಿಯೊಂದು ಅರ್ಥಿಗಳಿಗೂ ಉಚಿತ ಆಪ್ತಸಮಾಲೋಚನೆ ಹಾಗೂ ಎ.ಆರ್.ಟಿ. ಚಿಕಿತ್ಸೆ ಮತ್ತು ಗರ್ಭಿಣಿಸ್ತ್ರಿಯರಿಗೂ ಹಾಗೂ ಜನನವಾದ ಮಗುವಿನ 18 ತಿಂಗಳಿನವರೆಗೂ ಫಾಲೋಅಪ್ ಮಾಡಲಾಗಿದೆ ಎಂದು ತಿಳಿಸಿದರು.

ಸಭೆಯಲ್ಲಿ ಜಿಪಂ ಸಿಇಒ ರಾಹುಲ್ ರತ್ನಂ ಪಾಂಡೆಯ, ಅಪರ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಹೇಮಂತ್ ಕುಮಾರ್, ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿಗಳಾದ ಡಾ ಟಿ.ಲಿಂಗರಾಜು, ಜಿಲ್ಲಾ ಹಾಗೂ ತಾಲ್ಲೂಕ ಆಸ್ಪತ್ರೆಗಳ ಮುಖ್ಯ ವೈದ್ಯಾಧಿಕಾರಿಗಳು ಇತರರಿದ್ದರು.

# SSLC ಈ ಬಾರಿ ಫಲಿತಾಂಶ ನಮ್ಮದೆ ಹೈ ಸ್ಕೋರ್‌ಗೆ ಈಗಿಂದಲೇ ಅಭ್ಯಾಸ ಮಾಡಿ

Hampi Times Margadarshi — ಮನಸ್ಸು ಮಾಡು – ಕರ್ತವ್ಯ ನಿಷ್ಠನಾಗು – ಕಾದು ನೋಡು


ಹಂಪಿ ಟೈಮ್ಸ್ ಇ–ಪೇಪರ್‌ಗಾಗಿ ಭೇಟಿ ನೀಡಿ: https://epaper.hampitimes.com

ಹಂಪಿ ಟೈಮ್ಸ್ ಮಾರ್ಗದರ್ಶಿ SSLC: ಗಣಿತ

### ತ್ರಿಭುಜಗಳು

**ಥೇಲ್ಸ್ (ಮೂಲ ಸಮಾನುಪಾತತೆಯ) ಪ್ರಮೇಯ**

"ತ್ರಿಭುಜದ ಎರಡು ಬಾಹುಗಳನ್ನು ಎರಡು ವಿಭಿನ್ನ ಬಿಂದುಗಳಲ್ಲಿ ಛೇದಿಸುವಂತೆ ಒಂದು ಬಾಹುವಿಗೆ ಸಮಾನಾಂತರವಾಗಿ ಎಳೆದ ಸರಳರೇಖೆಯು ಉಳಿದೆರಡು ಬಾಹುಗಳನ್ನು ಸಮಾನುಪಾತದಲ್ಲಿ ವಿಭಾಗಿಸುತ್ತದೆ."




ದತ್ತ : ΔABC ಯಲ್ಲಿ DE || BC

ಸಾಧನೀಯ: $\frac{AD}{BD} = \frac{AE}{EC}$

ರಚನೆ : BE & CD ಸೇರಿಸಿ

DM ⊥ AC

EN ⊥ AB

ಸಾಧನೆ : ΔADE ಮತ್ತು ΔDBE ಗಳಲ್ಲಿ

$\frac{ವಿ(\Delta ADE)}{ವಿ(\Delta DBE)} = \frac{\frac{1}{2} AD x EN}{\frac{1}{2} DB x EN}$ (Δವಿಸ್ತೀರ್ಣ = $\frac{1}{2}$ ಪಾದ x ಎತ್ತರ)

$\frac{ವಿ(\Delta ADE)}{ವಿ(\Delta DBE)} = \frac{AD}{DB}$ --------- (1)

ΔAED ಮತ್ತು ΔECD ಗಳಲ್ಲಿ

$\frac{ವಿ(\Delta AED)}{ವಿ(\Delta ECD)} = \frac{\frac{1}{2} AE x DM}{\frac{1}{2} EC x DM}$ (Δವಿಸ್ತೀರ್ಣ = $\frac{1}{2}$ ಪಾದ x ಎತ್ತರ)

$\frac{ವಿ(\Delta AED)}{ವಿ(\Delta ECD)} = \frac{AE}{EC}$ --------- (2)

ವಿ(ΔBDE) = ವಿ(ΔDEC) ----------(3)

[∵ ಒಂದೇ ಪಾದ DF ಹಾಗೂ BC || DE]


ಸಮೀಕರಣ (1), (2) ಮತ್ತು (3) ರಿಂದ

$\frac{AD}{DB} = \frac{AE}{EC}$ ಎಂದು ಸಾಧಿಸಿದೆ.

### ಕೋನ ಕೋನ ಕೋನ ನಿರ್ಧಾರಕ ಗುಣ

ಎರಡು ತ್ರಿಭುಜಗಳಲ್ಲಿ ಅನುರೂಪ ಕೋನಗಳು ಸಮವಾದರೆ ಅವುಗಳ ಅನುರೂಪ ಬಾಹುಗಳ ಅನುಪಾತಗಳು ಸಮ **(ಅಥವಾ ಸಮಾನುಪಾತ)** ದಲ್ಲಿದ್ದರೆ, ಆ ತ್ರಿಭುಜಗಳು ಸಮರೂಪವಾಗಿರುತ್ತವೆ.

ದತ್ತ: $\angle A = \angle D, \angle B = \angle E, \angle C = \angle F$




*ಸಾಧನೀಯ:* $\frac{AB}{DE} = \frac{BC}{EF} = \frac{AC}{DF}$

*ರಚನೆ:* DP = AB, DQ = AC *ಆಗುವಂತೆ ಕತ್ತರಿಸಿ* PQ *ಸೇರಿಸಿ.*

*ಸಾಧನೆ:* ΔABC ಮತ್ತು ΔDPQ *ಗಳಲ್ಲಿ*

| | |
|---|---|
| $\angle A = \angle D$ | ದತ್ತ |
| AB = DP | ರಚನೆ |
| AC = DQ | ರಚನೆ |
| ΔABC ≅ ΔDPQ | *ಬಾ.ಕೋ.ಬಾ. ಸಿದ್ಧಾಂತ* |
| $\angle B = \angle P$ | ಸ.ತ್ರಿ.ಅ.ಭಾ. |
| ಆದರೆ, $\angle B = \angle E$ | ದತ್ತ |

$\therefore \angle P = \angle E$ ∴ PQ || EF

$\frac{DP}{DE} = \frac{DQ}{DF} = \frac{PQ}{EF}$ | *ರಚನೆ & ಮೂ.ಸ.ಉ.ಪ್ರ.*

$\frac{AB}{DE} = \frac{BC}{EF} = \frac{AC}{DF}$

ΔABC ≅ ΔDEF *ಎಂದು ಸಾಧಿಸಿದೆ.*

ಮುಂದುವರೆಯುವುದು.......

ಮಾರ್ಗದರ್ಶಿ ಶಿಕ್ಷಕರು : ಎಂ.ಎಸ್.ಮಂಜುನಾಥ, ಶಿಕ್ಷಕರು, ಹಗರಿಬೊಮ್ಮನಹಳ್ಳಿ (ತಾ) ವಿಜಯನಗರ (ಜಿಲ್ಲೆ)

ಸಾಯಿಮಣಿ ಪ್ರಕಾಶನ, ಹೊಸಪೇಟೆ

Printed by: MANJUNATHA .H .B Published by: A. SHUBHA. Owned by: A. SHUBHA and Printed at : AMRITH PRINTERS, No. 63/A, Opp. Police Station, Ramanagara, Hagaribommanahalli – 583212, Vijayanagara Dist., Karnataka. Published at : At Ward No.15, Near Bannimahankali Temple, 3rd Cross, New Amaravathi, Hospet - 583201, Vijayanagara Dist., Karnataka. Editor : BASAPUR BASAVARAJA, PRGI No:KARKAN/2023/88055